# ಅನಂತಪಥ

ANANTHKUMAR PRATISHTHANA


ನಾನು ಕಂಡಂತೆ ಅನಂತಕುಮಾರ್

ಶ್ರೀ ಬಿ ಸಿ ನಾಗೇಶ್
ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ



ಕಾರ್ಯಕರ್ತರ ಪಡೆಯನ್ನು ಬೆಳೆಸಿದ ಅಸಾಮಾನ್ಯ ನಾಯಕ ಪುಟ 4


ಸಂಪುಟ - 2 | ಜನವರಿ - 2022 | ಸಂಚಿಕೆ - 7


# ಗ್ರಾಮಚೇತನ: ನೇತೃತ್ವ ವಿಕಸನ ಶಿಬಿರ




ಬೆಂಗಳೂರಿನ ಅನಂತಕುಮಾರ್ ಪ್ರತಿಷ್ಠಾನವು ಕಳೆದ ಡಿಸೆಂಬರ್ 24 ರಿಂದ 26ರವರೆಗೆ ಅದಮ್ಯ ಚೇತನ ಮತ್ತು ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನದ ಸಹಯೋಗದೊಡನೆ ಸಂಸ್ಥಾನದ ಜಿಗಣಿ ಕೇಂದ್ರದಲ್ಲಿ ಗ್ರಾಮಪಂಚಾಯತಿ ಸದಸ್ಯೆಯರಿಗಾಗಿ ನೇತೃತ್ವ ವಿಕಸನ ಶಿಬಿರವನ್ನು ಏರ್ಪಡಿಸಿತ್ತು. ಗ್ರಾಮ ಚೇತನ ಎಂಬ ಹೆಸರಿನ ಈ ಶಿಬಿರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಿಂದ ಆಗಮಿಸಿದ್ದ 27 ಸದಸ್ಯೆಯರು ಭಾಗವಹಿಸಿದ್ದರು.

ಡಿಸೆಂಬರ್ 24 ರಂದು ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಎಸ್-ವ್ಯಾಸ ಸಂಸ್ಥೆಯ ಮುಖ್ಯಸ್ಥರಾದ ಡಾ. ನಾಗೇಂದ್ರ ಗುರೂಜಿಯವರು ನಾಯಕತ್ವ ವಹಿಸಲು ಆಸಕ್ತನಾದ ವ್ಯಕ್ತಿಯು ತನ್ನ ಗುಣ,ವ್ಯಕ್ತಿತ್ವಗಳನ್ನು ಬೆಳೆಸಿಕೊಳ್ಳುವ ಬಗೆ, ಹಾಗೂ ಜೀವನಮೌಲ್ಯಗಳ ವರ್ಧನೆಯನ್ನು ಕುರಿತು ವಿವರಿಸಿದರು. ಕೇಂದ್ರದ ಉಪಕುಲಪತಿಗಳಾದ ಡಾ. ಎನ್. ಕೆ. ಮಂಜುನಾಥ್ ಅವರು ಎಸ್-ವ್ಯಾಸ ಸಂಸ್ಥೆಯ ವಿವಿಧ ಚಟುವಟಿಕೆಗಳನ್ನು ಪರಿಚಯಮಾಡಿಕೊಟ್ಟರು. ಅದಮ್ಯ ಚೇತನದ ಮುಖ್ಯಸ್ಥರಾದ ಡಾ. ತೇಜಸ್ವಿನಿ ಅನಂತಕುಮಾರ್ ಜನಪ್ರತಿನಿಧಿಗಳಿಗೆ ನೇತೃತ್ವ ವಿಕಸನ ಶಿಬಿರದ ಅಗತ್ಯವನ್ನು ಕುರಿತು ತಿಳಿಸಿದರು.

ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ.ವಿ. ಕೃಷ್ಣಭಟ್ ಮಾತನಾಡಿ, ಜನನಾಯಕರಾಗುವ ನಿಟ್ಟಿನಲ್ಲಿ ನೇತೃತ್ವ ವಿಕಸನ ಶಿಬಿರಗಳ ಮಹತ್ವವನ್ನು ವಿವರಿಸಿದರು. ಶಿಬಿರದ ನಿರ್ದೇಶಕ ಶ್ರೀ ಟಿ.ಎಸ್. ಗೋಪಾಲ್ ಶಿಬಿರದ ರೂಪರೇಷೆಯನ್ನು ಪರಿಚಯಿಸಿದರು. ರಿಜಿಸ್ಟ್ರಾರ್ ಡಾ. ಎಂ.ಕೆ. ಶ್ರೀಧರ್ ಎಲ್ಲರನ್ನೂ ಸ್ವಾಗತಿಸಿದರು.



ಡಿಸೆಂಬರ್ 25 ಮತ್ತು 26ರಂದು ನಡೆದ ಶಿಬಿರದ ವಿವಿಧ ಅವಧಿಗಳಲ್ಲಿ ನಾಯಕತ್ವದ ಮಾದರಿಯಾಗಿ ಅನಂತಕುಮಾರ್, ನಾಯಕತ್ವ ವಿಕಸನ ಹೇಗೆ, ಕೃಷಿ, ತ್ಯಾಜ್ಯ ನಿರ್ವಹಣೆ, ಆಡಳಿತ ವ್ಯವಸ್ಥೆಯಲ್ಲಿ ಪಂಚಾಯತಿಯ ಸ್ಥಾನ ಮತ್ತು ಮಹತ್ವ, ಆರೋಗ್ಯ ನಿರ್ವಹಣೆ, ಆಹಾರ, ಸಂವಹನ ಕೌಶಲ, ಗುಂಪು ಚರ್ಚೆ, ಸಾಂಘಿಕ ಪ್ರಯತ್ನಗಳು- ಮೊದಲಾದ ವಿಷಯಗಳ ಬಗೆಗೆ ಅನೇಕ ಪರಿಣತ ಸಂಪನ್ಮೂಲ ವ್ಯಕ್ತಿಗಳು ಶಿಬಿರಾರ್ಥಿಗಳೊಡನೆ ಸಂವಾದ ನಡೆಸಿದರು. ಎಸ್-ವ್ಯಾಸ ಕೇಂದ್ರದ ಯೋಗಶಿಕ್ಷಕ ಶ್ರೀ ಶಂಕರ್ ಅವರು ಶಿಬಿರಾರ್ಥಿಗಳಿಗೆ ಕೆಲವು ಅವಧಿಗಳಲ್ಲಿ ಯೋಗ, ಪ್ರಾಣಾಯಾಮ ಮೊದಲಾದವುಗಳ ಪ್ರಾಥಮಿಕ ಅಭ್ಯಾಸಗಳನ್ನು ಬೋಧಿಸಿದರು.

ಡಿಸೆಂಬರ್ 26 ರಂದು ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಎಸ್-ವ್ಯಾಸ ಸಂಸ್ಥಾನದ ಆರೋಗ್ಯಧಾಮದ ನಿರ್ದೇಶಕರಾದ ಡಾ. ನಾಗರತ್ನರವರು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವುದು ಸಾಧ್ಯವೆಂದು ಹಿತನುಡಿದರು. ನೇತೃತ್ವವಿಕಸನ ಶಿಬಿರವು ಯಶಸ್ವಿಯಾಗಿ ಸಂಪನ್ನಗೊಳ್ಳಲು ಪ್ರತಿಷ್ಠಾನಕ್ಕೆ ವ್ಯಾಸ ಸಂಸ್ಥಾನದ ಸಹಯೋಗಕ್ಕಾಗಿ ಡಾ. ತೇಜಸ್ವಿನಿ ಅನಂತಕುಮಾರ್ ಅವರು ಕೃತಜ್ಞತೆ ವ್ಯಕ್ತಪಡಿಸಿದರು. ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ. ಎಂ.ಕೆ. ಶ್ರೀಧರ್, ಸಾಮಾಜಿಕ ಕಾರ್ಯಕರ್ತ ಶ್ರೀ ಅಶ್ವತ್ಥನಾರಾಯಣ ಮತ್ತು ಶಿಬಿರದ ನಿರ್ದೇಶಕ ಶ್ರೀ ಟಿ.ಎಸ್. ಗೋಪಾಲ್ ಮೊದಲಾದವರು ಉಪಸ್ಥಿತರಿದ್ದರು.

## ಅದಮ್ಯ ಚೇತನ ಸೇವಾ ಉತ್ಸವ ಸಂಕಲ್ಪ 2022

22 ವರ್ಷಗಳ ಹಿಂದೆ ಹೊಸ ಸಹಸ್ರಮಾನದ ಮೊದಲ ದಿನದಂದು ಸನ್ಮಾನ್ಯ ಅನಂತ್ ಕುಮಾರ್ ಅವರು ಪ್ರಾರಂಭಿಸಿದ "ವಂದೇಮಾತರಂ ಗಾಯನ ಹಾಗೂ ಹೊಸವರ್ಷದ ಸಂಕಲ್ಪವನ್ನು" ಮುಂದುವರೆಸಿಕೊಂಡು ಹೋಗುತ್ತಾ ದೇಶಕ್ಕೆ ಸ್ವಾತಂತ್ರ್ಯ ದೊರೆತ ಅಮೃತ ಮಹೋತ್ಸವದ ಶುಭ ಸಂದರ್ಭದಲ್ಲಿ ಅನ್ನ - ಅಕ್ಷರ - ಆರೋಗ್ಯ - ಪ್ರಕೃತಿ -ಸಂಸ್ಕೃತಿ ಸೇವಾ ಪ್ರಕಲ್ಪಗಳ ಯಶಸ್ವಿ ಮುನ್ನಡೆಗಾಗಿ ನಾವು ಶ್ರಮಿಸುತ್ತೇವೆ.

ಭಾರತದ ಬುನಾದಿಯಾಗಿರುವ ಗ್ರಾಮೀಣ ಭಾಗದ ವಿಶೇಷವಾಗಿ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಸಮಯ ನೀಡುತ್ತೇವೆ.

ದೇಶದ ಭವಿಷ್ಯವಾದ ಯುವಜನತೆಯ ಜೊತೆಗೂಡಿ ದೇಶ ಮೊದಲು ಎಂಬ ಭಾವನೆಯೊಂದಿಗೆ ನೆಲ-ಜಲ-ಪರಿಸರ-ಸಂಸ್ಕೃತಿ-ಪರಂಪರೆಯ ರಕ್ಷಣೆಗಾಗಿ ಶ್ರಮಿಸುತ್ತೇವೆ ಎಂಬ ಸಂಕಲ್ಪವನ್ನು ಮಾಡುತ್ತೇವೆ.

ಭಾರತ್ ಮಾತಾ ಕಿ ಜೈ!

## ವಂದೇ ಮಾತರಂ




2022ನೇ ನವವರ್ಷದ ಮೊದಲ ದಿನದಂದು ಅದಮ್ಯ ಚೇತನದ ಆವರಣದಲ್ಲಿ ವಂದೇ ಮಾತರಂ ಗೀತೆಯನ್ನು ಹಾಡುವ ಮೂಲಕ ಹೊಸ ವರುಷವನ್ನು ಸಾಂಪ್ರದಾಯಕವಾಗಿ ಸ್ವಾಗತಿಸಲಾಯಿತು.

ವಿವರ ಪುಟ 10 ರಲ್ಲಿ

# ಸಂಸ್ಕೃತಿಯ ತಳಹದಿಯ ಮೇಲೆ ರಾಷ್ಟ್ರನಿರ್ಮಾಣ

## (ನೇತೃತ್ವ ವಿಕಸನ ಶಿಬಿರದ ಉದ್ಘಾಟನಾ ಭಾಷಣ)

**ಪದ್ಮಶ್ರೀ ಡಾ. ಎಚ್. ಆರ್. ನಾಗೇಂದ್ರ**
ಕುಲಾಧಿಪತಿ, ಎಸ್-ವ್ಯಾಸ ವಿಶ್ವವಿದ್ಯಾಲಯ



**ಕೇ**ವಲ ಸಂಪತ್ ಸಮೃದ್ಧಿಯ ಮೂಲಕ, ಆರ್ಥಿಕ ಸೂಪರ್ ಪವರ್ ಆಗುವುದರ ಮೂಲಕ ನಮ್ಮ ದೇಶವನ್ನು ಮತ್ತೆ ಆದರ್ಶ ಭಾರತವನ್ನಾಗಿ ಮಾಡುವುದು ಸಾಧ್ಯವಿಲ್ಲ. ದೊಡ್ಡದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಿ ಶ್ರೇಷ್ಠಾತಿಶ್ರೇಷ್ಠ ಉತ್ಪನ್ನಗಳನ್ನು ತಯಾರಿಸಿದರೆ ಸಾಲದು. ಗಗನಚುಂಬಿ ಕಟ್ಟಡಗಳ ನಿರ್ಮಾಣದಿಂದಲೂ ಭಾರತ ಆದರ್ಶ ಭಾರತವಾಗುವುದಿಲ್ಲ; ಭಾರತದ ಸಂಸ್ಕೃತಿಯ ಮೂಲ ಆಧಾರಗಳ ಮೇಲೆ ದೇಶನಿರ್ಮಾಣ ಮಾಡಿದರೆ ಮಾತ್ರ ಆದರ್ಶ ಭಾರತವಾಗುತ್ತದೆ. ಹೀಗೆಂದು ಹೇಳಿದವರು, ಸ್ವಾಮಿ ವಿವೇಕಾನಂದರು.

ತ್ಯಾಗ, ಸೇವೆ ಮತ್ತು ಪ್ರೇಮ ಅಥವಾ ವಾತ್ಸಲ್ಯ ಭಾವಗಳು ಭಾರತೀಯ ಸಂಸ್ಕೃತಿಯ ಮೂಲಾಧಾರಗಳು. ಮಹಿಳೆಯರಲ್ಲಿ ಈ ಮೂರೂ ಗುಣಗಳು ಸಹಜವಾಗಿರುತ್ತವೆ. ವಾತ್ಸಲ್ಯ ಭಾವದಲ್ಲಿಯೇ ತ್ಯಾಗ ಮತ್ತು ಸೇವೆ ಅಡಕವಾಗಿದೆ. ತ್ಯಾಗ ಎಂದರೆ ಸದಾ ನೀಡುವುದು. ಮಕ್ಕಳಿಗೆ ಕೊಡುವುದೆಂದರೆ ತಾಯಿಗೆ ಅಪರಿಮಿತ ಆನಂದ. ಈ ಮಾತೃಹೃದಯದ ಮೂಲಕ ದೇಶ ಮತ್ತೆ ಮೇಲೆದ್ದು ಬರಬೇಕು. ಕೊಟ್ಟು ಬಡವರಾದವರಿಲ್ಲ. ಇದನ್ನು ಸಾಕಾರ ಮಾಡಿ ತೋರಿಸಿದ ಅನೇಕ ಉದಾಹರಣೆಗಳು ಭಾರತದಲ್ಲಿವೆ.

ಹಿಂದೊಮ್ಮೆ, ರಾಕ್ಷಸರು, ಮಾನವರು ಮತ್ತು ದೇವತೆಗಳು ಮಹಾವಿಷ್ಣುವಿನ ಬಳಿಸಾರಿ, ಮೋಕ್ಷವನ್ನು ಪಡೆಯಲು ತಮಗೇನಾದರೂ ಉಪದೇಶ ಮಾಡಿ ಎಂದು ಕೋರಿದರು. ಅದಕ್ಕೆ ಮಹಾವಿಷ್ಣುವು ದ, ದ, ದ ಎಂದು ಮೂವರನ್ನೂ ಉದ್ದೇಶಿಸಿ ಹೇಳಿದ.ಅದು ಎಲ್ಲರಿಗೂ ಅರ್ಥವಾಯಿತು.

ತಾವು ಸುಖ ಸಂಪತ್ತು, ಚಿರಯೌವನ, ಇಂದ್ರಿಯಲೋಲುಪತೆಗಳಲ್ಲಿ ಮುಳುಗಿರುವುದರಿಂದ ತಮಗೆ ಮೋಕ್ಷ ದೊರೆಯುವುದು ಕಷ್ಟ, ಆದುದರಿಂದ ತಾವು ದಮ, ಅಂದರೆ ಸಂಯಮ ಅಥವಾ ಬಹಿರಿಂದ್ರಿಯ ನಿಗ್ರಹ ಮಾಡಿಕೊಳ್ಳಬೇಕು ಎಂದು ದೇವತೆಗಳು ತಿಳಿದುಕೊಂಡರು. ರಾಕ್ಷಸರು, ಹೊಡಿ, ಬಡಿ, ಕಡಿ ಎಂದು ಸದಾ ಕ್ರೌರ್ಯದಲ್ಲಿ ನಿರತರಾಗಿರುವುದರಿಂದ ತಾವು ಪ್ರೀತಿಭಾವದಿಂದ ಬದುಕಬೇಕು, ದಯಾವಂತರಾಗಬೇಕು ಎಂದು ಭಾವಿಸಿದರು. ಮಾನವರು, ತಾವು ಸ್ವಾರ್ಥ, ಆಸೆ, ದುರಾಸೆಗಳಿಂದ ತಾವು ತುಂಬಿಕೊಂಡಿದ್ದೇವೆ, ಆದುದರಿಂದ ತಾವು ದಾನಗುಣವನ್ನು ಬೆಳೆಸಿಕೊಳ್ಳಬೇಕು ಎಂದು ಗ್ರಹಿಸಿದರು. ಈ ದಾನ, ದಯೆ ಮತ್ತು ದಮ ನಮ್ಮ ಸಂಸ್ಕೃತಿಯ ಮೂರು ಪ್ರಮುಖ ಆಯಾಮಗಳು. ಇದನ್ನೇ ವಿವೇಕಾನಂದರು, ತ್ಯಾಗ ಮತ್ತು ಸೇವೆ ಎಂದು ಕರೆದರು.

ಭಾರತೀಯ ಸಂಸ್ಕೃತಿಯ ಈ ಮೂಲ ತಳಹದಿಗಳ ಮೇಲೆ ಅತ್ಯುತ್ತಮ ಸಮಾಜವನ್ನು ನಮ್ಮ ಹಿರಿಯರು ಕಟ್ಟಿದ್ದರು. ವಿಜಯನಗರ ಸಾಮ್ರಾಜ್ಯದ ವೈಭವದ ಕಾಲದಲ್ಲಿ ಬೇರೆ ಬೇರೆ ದೇಶಗಳಿಂದ ಜನರು ಅಲ್ಲಿರುವ ಧನ, ದೌಲತ್ತು, ಸಮೃದ್ಧಿಗಳಿಂದ ಆಕರ್ಷಿತರಾಗಿ ಬರುತ್ತಿದ್ದರು. ಅವರು ಇಲ್ಲಿನ ವಿದ್ಯಾಭ್ಯಾಸ, ಜ್ಞಾನವನ್ನು ಪಡೆದುಕೊಳ್ಳಲು ಬರಲಿಲ್ಲ.

ವಿದೇಶಗಳಿಂದ ನಮ್ಮ ದೇಶಕ್ಕೆ ಬಂದವರು ಇಲ್ಲಿನ ಜನರ ಪ್ರೀತಿಪರ ನಡವಳಿಕೆ, ಸ್ನೇಹ, ಶುಚಿತ್ವ, ಸತ್ಯಸಂಧತೆ, ತ್ಯಾಗ ಮನೋಭಾವ, ಪ್ರಾಣಿ ಪಕ್ಷಿಗಳು ಪ್ರಶಾಂತವಾಗಿ ನರ್ತಿಸುತ್ತಿರುವುದು, ಜನರು ಪರಸ್ಪರ ಪ್ರೇಮಭಾವದಿಂದ ವರ್ತಿಸುವುದು ಮುಂತಾದವುಗಳಿಗೆ ಮಾರು ಹೋದರು.

ಇಂತಹ ವಾತಾವರಣ ಭಾರತದಲ್ಲಿ ಮತ್ತೆ ಉಂಟಾಗಬೇಕಾದರೆ ಪ್ರೇಮಭಾವವನ್ನು ನಾವು ಅಳವಡಿಸಿಕೊಳ್ಳಬೇಕು ಎಂದು ವಿವೇಕಾನಂದರು ಹೇಳಿದ್ದರು.

ಇದಕ್ಕೆ ವ್ಯತಿರಿಕ್ತವಾಗಿ, ನಮ್ಮ ದೇಶದ ರಾಜಕೀಯದಲ್ಲಿ ಪಾಶ್ಚಿಮಾತ್ಯ ಜಗತ್ತಿನ ಪ್ರಭಾವ ಕಂಡುಬರುತ್ತಿದೆ. ಹಣವಿದ್ದರೆ ಹೆಣವೂ ಬಾಯಿಬಿಡುತ್ತದೆ ಎಂಬಂತೆ ಹಣ ಮತ್ತು ತೋಳ್ಬಲಗಳು ಕೆಲಸ ಮಾಡುತ್ತಿವೆ.

ಪುಟ 7 ರಲ್ಲಿ ಮುಂದುವರೆದಿದೆ

## ಸ್ವಚ್ಛತೆ ಮತ್ತು ಸ್ವಾಸ್ಥ್ಯಗಳು ಸಮೃದ್ಧಿಗೆ ಪೂರಕ

**ಡಾ. ಆರ್. ನಾಗರತ್ನ**
ವೈದ್ಯಕೀಯ ನಿರ್ದೇಶಕರು, ಎಸ್-ವ್ಯಾಸ




2016ರಲ್ಲಿ ನಡೆದ ಯೋಗ ದಿನಾಚರಣೆಯ ಸಂದರ್ಭದ ಚಿತ್ರದಲ್ಲಿ ಶ್ರೀ ಅನಂತಕುಮಾರರೊಡನೆ ಡಾ. ಆರ್. ನಾಗರತ್ನ

**ಗ್ರಾ**ಮಪಂಚಾಯತಿಗೆ ಚುನಾಯಿತರಾಗಿರುವ ಬಹುತೇಕ ಎಲ್ಲ ಸದಸ್ಯೆಯರೂ ತಾಯಂದಿರಾಗಿದ್ದಾರೆ. ಕುಟುಂಬದ ನೆಲೆಯಲ್ಲಿ ಮಾತೃತ್ವದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ ಅನುಭವ ಅವರಿಗಿದೆ. ಆದರೆ ಚುನಾಯಿತರಾದ ಕ್ಷಣದಲ್ಲಿ ಅವರ ಮಕ್ಕಳ ಸಂಖ್ಯೆ ಒಂದು, ಎರಡರಿಂದ ಐನೂರಕ್ಕೆ ಹೆಚ್ಚುತ್ತದೆ. ಕ್ಷೇತ್ರದ ಎಲ್ಲ ಜನರು ಅವರ ಮಕ್ಕಳಾಗುತ್ತಾರೆ. ಆದುದರಿಂದ ತಮ್ಮ ಸ್ವಂತ ಮಕ್ಕಳಿಗೆ ತೋರಿಸಿದ ಪ್ರೀತಿ ಮತ್ತು ಕಾಳಜಿಯನ್ನು ಎಲ್ಲ 500 ಜನರ ವಿಷಯದಲ್ಲಿಯೂ ತೋರಿಸಬೇಕು. ನಮ್ಮ ಮಕ್ಕಳ ಸ್ವಚ್ಛತೆ ಅಥವಾ ಶುಭ್ರತೆ, ಸ್ವಾಸ್ಥ್ಯ, ಸಮೃದ್ಧಿ ಮತ್ತು ಸಂಸ್ಕೃತಿಯ ಬಗ್ಗೆ ವಹಿಸುವ ಕಾಳಜಿಯನ್ನು ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲ ಜನರಿಗೂ ವಿಸ್ತರಿಸಬೇಕು. ನಮ್ಮ ಪರಿಸರ ಮಾಲಿನ್ಯ ರಹಿತವಾಗಿರಬೇಕು, ನಮ್ಮ ದೇಹ ಸ್ವಚ್ಛವಾಗಿರಬೇಕು. ದೈನಂದಿನ ಸ್ವಚ್ಛತೆಯು ನಮ್ಮ ಆದ್ಯ ಕರ್ತವ್ಯವಾಗಬೇಕು.

ಸ್ವಾಸ್ಥ್ಯದ ವಿಷಯದಲ್ಲಿ ಆಹಾರವು ಪ್ರಮುಖವಾಗುತ್ತದೆ. ನಮ್ಮ ತಾತ, ಮುತ್ತಾತಂದಿರ ಆಹಾರವು ನಮಗೂ ಪ್ರಶಸ್ತವಾಗಿರುತ್ತದೆ. ಅದೇ ರೀತಿಯ ಆಹಾರ ನಮ್ಮ ಜನರಿಗೆ ದೊರೆಯುತ್ತಿದೆಯೇ ಎಂದು ಗಮನಿಸಬೇಕು. ಮನೆಯ ಫ್ರಿಜ್ಜಿನಲ್ಲಿ ತರಕಾರಿ ಬಿಟ್ಟು ಬೇರೇನೂ ಇರಬಾರದು. ತಟ್ಟೆ ತುಂಬ ತರಕಾರಿ (TTT) ಸೂತ್ರವನ್ನು ನಾವೆಲ್ಲರೂ ಪಾಲಿಸಬೇಕು. ನಮ್ಮ 500 ಜನ ಸದಸ್ಯರೂ ಪ್ರೀತಿಯಿಂದ ಅಡುಗೆ ಮಾಡಿ ಊಟಮಾಡುವ ವಾತಾವರಣ ನಿರ್ಮಾಣವಾಗಬೇಕು.

ಇಂದು ಜನರಲ್ಲಿ ಸಕ್ಕರೆ ಕಾಯಿಲೆ, ರಕ್ತದೊತ್ತಡ ಮುಂತಾದ ಕಾಯಿಲೆಗಳು ಹೆಚ್ಚಾಗುತ್ತಿವೆ. ನಾವು ತಿನ್ನುವ ಆಹಾರವೇ ಇದಕ್ಕೆ ಕಾರಣ. ನಾವು ಜಂಕ್ ಫುಡ್ ಎಂದು ಕರೆಯುವ ಚಿಪ್ಸ್, ಪ್ಯಾಕ್ ಮಾಡಿದ ಆಹಾರಗಳು, ಕೋಕಾಕೋಲಾ, ಫಾಂಟಾ, ಪಿಜ್ಜಾ ಮುಂತಾದ ಆಹಾರ ಪದಾರ್ಥಗಳನ್ನು ತ್ಯಜಿಸಬೇಕು. ಮನೆಯ ಸುತ್ತ ಕರಿಬೇವು, ಪಪ್ಪಾಯಿ, ದಾಳಿಂಬೆ, ನುಗ್ಗೆ ಮುಂತಾದ ಸಸ್ಯಗಳನ್ನು ಬೆಳೆಸಬೇಕು, ಪ್ರಾಕೃತಿಕವಾಗಿ ಲಭ್ಯವಿರುವ ಆಹಾರವನ್ನೇ ಸೇವಿಸಬೇಕು.


ಸಾವಯವ ಪದ್ಧತಿಯಲ್ಲಿ ಬೆಳೆದ ಆಹಾರ ಪದಾರ್ಥಗಳಿಗೆ ಉತ್ತೇಜನ ನೀಡಬೇಕು. ಮಕ್ಕಳ ಆರೋಗ್ಯವು ಉತ್ತಮವಾಗಿರಲು ನಿಯಮಿತವಾದ ವ್ಯಾಯಾಮವೂ ಅಗತ್ಯ. ಶಾಲೆಗಳಲ್ಲಿ "ಪಾಠದ ಮೂಲಕ ಆಟ ಮತ್ತು ಆಟದ ಮೂಲಕ ಪಾಠ" ಮಾಡುವುದರ ಮೂಲಕ ಮಕ್ಕಳ ವ್ಯಕ್ತಿತ್ವವು ಸರ್ವತೋಮುಖವಾಗಿ ವಿಕಾಸವಾಗುತ್ತದೆ. ಮಕ್ಕಳಲ್ಲಿ ಮಾನಸಿಕ ಶಕ್ತಿ, ಬೌದ್ಧಿಕ ಶಕ್ತಿ, ರಚನಾತ್ಮಕತೆ ಮತ್ತು ಸೃಜನಶೀಲತೆ ಬೆಳೆಯಲು ಸೂಕ್ತವಾದ ವಿದ್ಯಾಭ್ಯಾಸವನ್ನು ನೀಡಬೇಕು. ನಿಯಮಿತವಾದ ಯೋಗಾಭ್ಯಾಸದಿಂದ ಈ ಎಲ್ಲ ಶಕ್ತಿಗಳು ಬೆಳೆಯುತ್ತವೆ.

ಮನಸ್ಸಿನ ಮೇಲೆ ಸಂಪೂರ್ಣ ಹತೋಟಿಯನ್ನುಂಟುಮಾಡಿ, ಮಕ್ಕಳ ಸೋಮಾರಿತನ, ಅವರಲ್ಲಿನ ಕೋಪ, ಆತಂಕ, ಗಾಬರಿ, ಕೀಳರಿಮೆಗಳನ್ನು ದೂರ ಮಾಡಲು ಯೋಗವು ಸಹಾಯ ಮಾಡುತ್ತದೆ. ಕೀಳರಿಮೆ ನಿವಾರಿಸಲು ಸ್ಪರ್ಧೆಗಳೂ ಅತ್ಯಗತ್ಯ. ಇವುಗಳಿಂದ ಆತ್ಮಶಕ್ತಿಯೂ ಬೆಳೆಯುತ್ತದೆ.

ಸ್ವಚ್ಛತೆ ಮತ್ತು ಸ್ವಾಸ್ಥ್ಯಗಳು ಸಮೃದ್ಧಿಗೆ ಪೂರಕವಾಗಿರುತ್ತವೆ. ಅನೇಕ ಕೌಶಲ್ಯಾಭಿವೃದ್ಧಿ ಯೋಜನೆಗಳನ್ನು ನಡೆಸುವುದರ ಮೂಲಕ ಸಮೃದ್ಧಿಯನ್ನೂ ಸಾಧಿಸಬಹುದು. ಒಟ್ಟಿನಲ್ಲಿ ಹೇಳುವುದಾದರೆ, ಹಳ್ಳಿಯ ಪರಿಸರ ನಿರ್ಮಲವಾಗಿರಬೇಕು, ಜನರು ತಮ್ಮ ದೈಹಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು, ಅವರಿಗೆ ಉತ್ತಮ ಆಹಾರ ದೊರೆಯಬೇಕು, ಅವರು ಕಾಯಿಲೆಗೆ ತುತ್ತಾಗಬಾರದು, ಕಾಯಿಲೆ ಬಂದರೆ ಬೇಗ ಚೇತರಿಸಿಕೊಳ್ಳಬೇಕು, ಸಮೃದ್ಧಿ ಬರುತ್ತಿದ್ದಂತೆ ವ್ಯಕ್ತಿತ್ವ ವಿಕಾಸವಾಗಬೇಕು, ಜನರ ಮನೋಭಾವದಲ್ಲಿ ಪರಿವರ್ತನೆಯಾಗಬೇಕು, ಜನರು ದಾನಗುಣವನ್ನು ಅಳವಡಿಸಿಕೊಳ್ಳಬೇಕು, ಗಳಿಸುವುದು ಕೊಡುವುದಕ್ಕಾಗಿ ಎಂಬುದೇ ನಮ್ಮ ಸಂಸ್ಕೃತಿಯಾಗಬೇಕು. ನಮ್ಮನ್ನು ಆಯ್ಕೆ ಮಾಡಿದ 500 ಜನರು ಈ ಎಲ್ಲ ವಿಭಾಗಗಳಲ್ಲಿ ಸರ್ವತೋಮುಖವಾಗಿ ಬೆಳೆಯಬೇಕು ಎಂಬ ಉದ್ದೇಶದಿಂದ ಕಾರ್ಯರತರಾಗಬೇಕು. ನಮ್ಮ ಪ್ರಶಾಂತಿ ಕುಟೀರಕ್ಕೆ ಸುಮಾರು 250 ಸಂಸ್ಥೆಗಳು ಸಂಯೋಜಿತವಾಗಿವೆ. ಯಾವುದೇ ಗ್ರಾಮ ಪಂಚಾಯತಿಯ ಸದಸ್ಯರು ನಡೆಸಬಯಸುವ ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಗಳನ್ನು ಈ ಸಂಯೋಜಿತ ಸಂಸ್ಥೆಗಳ ಮೂಲಕ ಒದಗಿಸಲು ಪ್ರಶಾಂತಿ ಕುಟೀರವು ಬದ್ಧವಾಗಿದೆ.

# ಕಾರ್ಯಕರ್ತರ ಪಡೆಯನ್ನು ಬೆಳೆಸಿದ ಅಸಾಮಾನ್ಯ ನಾಯಕ

## ನಾನು ಕಂಡಂತೆ



## ಅನಂತಕುಮಾರ್



**ಶ್ರೀ ಬಿ ಸಿ ನಾಗೇಶ್**

**ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ**

**ಅ**ನಂತಕುಮಾರರ ಜೊತೆಗೆ ನನ್ನ ಪರಿಚಯವಾಗಿದ್ದು ನಾವಿಬ್ಬರೂ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರಾಗಿದ್ದಾಗ. ಆದರೆ, ನಮ್ಮ ಎರಡು ಕುಟುಂಬಗಳ ನಡುವೆ ಇದ್ದ ಸಂಬಂಧ ಮೂರು ತಲೆಮಾರುಗಳ ಕಾಲದ್ದು. ಅನಂತಕುಮಾರರ ತಾಯಿ ಗಿರಿಜಾ ಶಾಸ್ತ್ರಿಯವರ ತಂದೆ ಶ್ರೀಕಂಠ ಪಂಡಿತರು ತಿಪಟೂರಿನಲ್ಲಿ ವೈದ್ಯಕೀಯ ವೃತ್ತಿಯಲ್ಲಿದ್ದರು. ನಮ್ಮ ಪೂರ್ವಿಕರೂ ತಿಪಟೂರಿನವರೇ. ನಮ್ಮ ಅಜ್ಜನೂ ಕೂಡ ಶ್ರೀಕಂಠ ಪಂಡಿತರ ನಿಕಟ ಸಂಪರ್ಕದಲ್ಲಿದ್ದರು. ಅನಂತಕುಮಾರರ ತಾಯಿ ಶ್ರೀಮತಿ ಗಿರಿಜಾ ಶಾಸ್ತ್ರಿ ಮತ್ತು ನಮ್ಮ ತಂದೆ ಒಂದೇ ತರಗತಿಯಲ್ಲಿ ಸಹಪಾಠಿಗಳಾಗಿದ್ದರು.

ನನ್ನ ಬಾಲ್ಯ ಮತ್ತು ಪಿಯುಸಿ ವರೆಗಿನ ವಿದ್ಯಾಭ್ಯಾಸ ತಿಪಟೂರಿನಲ್ಲಿಯೇ ನಡೆಯಿತು. ನಮ್ಮ ಮನೆ ತಿಪಟೂರಿನ ಮೈಲಾರಯ್ಯ ಛತ್ರದ ಪಕ್ಕದಲ್ಲಿಯೇ ಇತ್ತು. ಈ ಛತ್ರದಲ್ಲಿ ಅನೇಕ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳು ನಡೆಯುತ್ತಿದ್ದವು. ಅದರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಿಬಿರವೂ ನಡೆಯುತ್ತಿತ್ತು. ನಮ್ಮ ಮಾವಂದಿರು ಸಂಘದ ಸಕ್ರಿಯ ಕಾರ್ಯಕರ್ತರಾಗಿದ್ದರು. ಅವರಿಂದ ಪ್ರೇರಿತನಾಗಿ, ನಮ್ಮ ತಾಯಿಯವರ ಉಪದೇಶದಿಂದ ನಾನೂ ಸಂಘದ ಕಾರ್ಯಕರ್ತನಾದೆ.

ತಿಪಟೂರಿನಲ್ಲಿ ಪಿಯುಸಿ ವಿದ್ಯಾಭ್ಯಾಸ ಮುಗಿಸಿದ ಮೇಲೆ ಇಂಜನಿಯರಿಂಗ್ ಓದುವ ಸಲುವಾಗಿ ನಾನು ಬೆಂಗಳೂರಿನ ಬಿಎಂಎಸ್ ಕಾಲೇಜಿಗೆ ಸೇರಿಕೊಂಡೆ. ಬೆಂಗಳೂರಿಗೆ ಬಂದ ಮೇಲೆ ನನ್ನ ಸಂಘದ ಸಂಪರ್ಕ ಮುಂದುವರೆಯಿತು. ನಾನು ಸಂಘದ ಶಾಖೆಯೊಂದರ ಕಾರ್ಯವಾಹ ಆಗಿದ್ದೆ.

ಇಂದಿರಾ ಗಾಂಧಿಯವರು ಹೇರಿದ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಅನಂತಕುಮಾರರು ಹುಬ್ಬಳ್ಳಿಯಲ್ಲಿ ಜೈಲುವಾಸ ಅನುಭವಿಸಿದ ಕಾಲದಲ್ಲಿ ನಾನೂ ತಿಪಟೂರಿನ ಜೈಲಿನಲ್ಲಿ ಅದೇ ಕಾರಣಕ್ಕಾಗಿ ಎರಡು ದಿನಗಳ ಜೈಲುವಾಸ ಅನುಭವಿಸಬೇಕಾಗಿ ಬಂದಿತು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ನಾಯಕರಾಗಿದ್ದ ಡಾ. ಎಂ ಕೆ ಶ್ರೀಧರ್ ಒಮ್ಮೆ ನಮ್ಮ ಕಾಲೇಜಿನ ಆವರಣದಲ್ಲಿ ನಿಂತಿದ್ದರು. ನಾನು ಕುತೂಹಲದಿಂದ ಅವರನ್ನು ಮಾತನಾಡಿಸಿದೆ. ಅವರು ನನ್ನನ್ನು ವಿದ್ಯಾರ್ಥಿ ಪರಿಷತ್ತಿನ ಸದಸ್ಯನಾಗುವಂತೆ ಆಹ್ವಾನಿಸಿದರು. ಅಲ್ಲಿಂದ ನನ್ನ ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳು ಪ್ರಾರಂಭವಾದವು. ಇದು ನಡೆದದ್ದು, 1978 ರಲ್ಲಿ. ಇದೇ ಸಮಯದಲ್ಲಿ ಅನಂತಕುಮಾರರು ಹುಬ್ಬಳ್ಳಿಯ ಕಾಲೇಜಿನಲ್ಲಿ ಓದುತ್ತಿದ್ದರು, ವಿದ್ಯಾರ್ಥಿ ಪರಿಷತ್ತಿನಲ್ಲಿ ದೊಡ್ಡ ಹೆಸರು ಮಾಡಿದ್ದರು. ವಿದ್ಯಾರ್ಥಿ ಪರಿಷತ್ತಿನ ನಾಯಕರಾಗಿ ನನಗೆ ಅವರ ಪರಿಚಯವಾಗಿದ್ದು ಪರಿಷತ್ತಿನ ಶಿವಮೊಗ್ಗ ಸಮ್ಮೇಳನದಲ್ಲಿ. ಅಲ್ಲಿ ನಮ್ಮಿಬ್ಬರ ಕುಟುಂಬಗಳ ನಡುವಣ ಬಾಂಧವ್ಯದ ಅರಿವು ನಮಗಾಯಿತು; ನಮ್ಮಿಬ್ಬರ ನಡುವೆ ಸ್ನೇಹ ಬಾಂಧವ್ಯವೂ ಬೆಳೆಯಿತು.

1982 ರಿಂದ 1985 ರ ವರೆಗೆ ನಾನು ವಿದ್ಯಾರ್ಥಿ ಪರಿಷತ್ತಿನ ಪೂರ್ಣಾವಧಿ ಕಾರ್ಯಕರ್ತನಾಗಿ ಕೆಲಸ ಮಾಡಿದೆ. ಈ ಅವಧಿಯಲ್ಲಿ ಅನಂತಕುಮಾರರು ಮೊದಲು ರಾಜ್ಯ ಸಹಕಾರ್ಯದರ್ಶಿಯಾಗಿದ್ದು ನಂತರ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. 1985 ರಲ್ಲಿ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಆಯ್ಕೆಯಾಗಿ ಮುಂದೆ ಸಂಘದ ಆದೇಶದಂತೆ ಭಾರತೀಯ ಜನತಾ ಪಕ್ಷವನ್ನು ಸೇರುವ ವರೆಗೂ ಅದೇ ಹುದ್ದೆಯಲ್ಲಿ ಮುಂದುವರೆದರು.

ಎಂಭತ್ತರ ದಶಕದಲ್ಲಿ ರಾಜ್ಯದಲ್ಲಿದ್ದ ಇತರ ವಿದ್ಯಾರ್ಥಿ ಸಂಘಟನೆಗಳಾದ ಎಸ್‌ಎಫ್‌ಐ ಮತ್ತು ಎನ್‌ಎಸ್‌ಯುಐ ನಾಮಮಾತ್ರ ಸಂಘಟನೆಗಳಾಗಿ ಉಳಿದಿದ್ದವು. ಅವುಗಳಲ್ಲಿ ನಾಯಕತ್ವದ ಕೊರತೆಯೂ ಇತ್ತು. ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡ ಅನಂತಕುಮಾರ್ ಮತ್ತು ಸಂಗಡಿಗರು ವಿದ್ಯಾರ್ಥಿ ಪರಿಷತ್ತನ್ನು ಪ್ರಬಲವಾಗಿ ಬೆಳೆಸಿದರು. ಅನಂತಕುಮಾರರು ಸಕ್ರಿಯವಾಗಿದ್ದ ಕಾಲದಲ್ಲಿ ವಿದ್ಯಾರ್ಥಿ ಪರಿಷತ್ತು ಹಲವಾರು ಕಾರ್ಯಕ್ರಮಗಳನ್ನು, ಹೋರಾಟಗಳನ್ನು ನಿರಂತರವಾಗಿ ಸಂಘಟಿಸುತ್ತಿತ್ತು. ಆಗ ಹುಬ್ಬಳ್ಳಿಯನ್ನೇ ಕೇಂದ್ರವಾಗಿರಿಸಿಕೊಂಡಿದ್ದ ಅನಂತಕುಮಾರರು ಬೆಂಗಳೂರಿಗೆ ಬಂದಾಗ ಒಂದು ಕ್ಷಣವನ್ನೂ ವ್ಯರ್ಥ ಮಾಡದೆ, ಮುಖ್ಯಮಂತ್ರಿಗಳನ್ನು, ಶಿಕ್ಷಣ ಮಂತ್ರಿಗಳನ್ನು, ರಾಜ್ಯಪಾಲರನ್ನು, ಉಪಕುಲಪತಿಗಳನ್ನು, ಪತ್ರಕರ್ತರನ್ನು ಮತ್ತು ಇತರ ಪ್ರಭಾವಶಾಲಿ ವ್ಯಕ್ತಿಗಳನ್ನು ಭೇಟಿಯಾಗುತ್ತಿದ್ದರು.

ಆ ಕಾಲದಲ್ಲಿ ಪರಿಷತ್ತಿನ ಕಾರ್ಯಾಲಯವು ಅರಳೇಪೇಟೆಯಲ್ಲಿತ್ತು. ಎಂಟು ಅಡಿ ಅಗಲ, ಹತ್ತು ಅಡಿ ಉದ್ದದ ಒಂದು ಪುಟ್ಟ ಕೋಣೆ, ಅದಕ್ಕೆ ಹೊಂದಿ ಕೊಂಡಿದ್ದ ಪುಟ್ಟ ಅಡುಗೆ ಮನೆ. ಅಷ್ಟೇ ದೊಡ್ಡ ಇನ್ನೊಂದು ಕೋಣೆ. ಇಷ್ಟು ಜಾಗದಲ್ಲಿಯೇ ಸುಮಾರು ಹತ್ತು ಹನ್ನೆರಡು ಪೂರ್ಣಾವಧಿ ಕಾರ್ಯಕರ್ತರು ಮಲಗುತ್ತಿದ್ದೆವು. ಅನಂತಕುಮಾರರೂ ಬೆಂಗಳೂರಿಗೆ ಬಂದಾಗ ನಮ್ಮ ಜೊತೆಯಲ್ಲಿಯೇ ಇರುತ್ತಿದ್ದರು. ಕೆಲಸವಿಲ್ಲದಿದ್ದರೆ ಅವರು ಏಳುವುದು ತುಂಬ ನಿಧಾನ. ಕೆಲಸವಿದ್ದಾಗ ಬೆಳಿಗ್ಗೆ ನಾಲ್ಕು ಗಂಟೆಗೇ ಎದ್ದುಬಿಡುತ್ತಿದ್ದರು. ಬೆಳಿಗ್ಗಿನ ತಿಂಡಿ ಬಳೆಪೇಟೆಯ ಮಲಬಾರ್ ಹೋಟೆಲಿನಲ್ಲಿ, ರಾತ್ರಿ ತುಂಬ ತಡವಾಗಿ ಅವೆನ್ಯೂ ರಸ್ತೆಯಲ್ಲಿ ರಾತ್ರಿಯ ಆಹಾರ ಸೇವನೆ. ಎಲ್ಲರೂ ಒಟ್ಟಿಗೆ ನಡೆದು ಹೋಗುತ್ತಿದ್ದೆವು. ನಮ್ಮಲ್ಲಿ ಒಂದು ಹಳೆಯ ಸ್ಕೂಟರ್ ಕೂಡ ಇತ್ತು. ಅವರು ಬೆಂಗಳೂರಿನಲ್ಲಿದ್ದಾಗ ಚಹಾ, ಹರಟೆ, ಚರ್ಚೆಗಳನ್ನು ಮುಗಿಸಿ ನಾವು ಮಲಗುವಾಗ ಮಧ್ಯರಾತ್ರಿ ಮೀರುತ್ತಿತ್ತು.

ಪರಿಷತ್ತಿನ ವಿದ್ಯಾರ್ಥಿ ಪತ್ರಿಕೆಗೆ ಲೇಖನಗಳನ್ನು ಬರೆಯುವುದು, ಇತರ ಪತ್ರಿಕೆಗಳಿಗೆ ಬರೆಯುವುದು, ಭಾಷಣ ಮಾಡುವುದು, ಮನವಿ ಪತ್ರಗಳನ್ನು ಮತ್ತು ಕರಪತ್ರಗಳನ್ನು ಬರೆಯುವುದು, ಠರಾವುಗಳು, ಸಾಹಿತ್ಯ ಸೃಷ್ಟಿ ಮುಂತಾದ ಎಲ್ಲ ಕೆಲಸಗಳನ್ನು ಅವರು ಲೀಲಾಜಾಲವಾಗಿ ನಿರ್ವಹಿಸುತ್ತಿದ್ದರು.

ಅನಂತಕುಮಾರರು ಅವಕಾಶಗಳನ್ನು ತಾವೇ ಸೃಷ್ಟಿಸಿಕೊಳ್ಳುತ್ತಿದ್ದರು. ಉದಾಹರಣೆಗೆ, ಅವರು ಅರಸೀಕೆರೆಯಿಂದ ಬೆಂಗಳೂರಿಗೆ ಬರುತ್ತಿದ್ದರೆ ಅರ್ಧ ಗಂಟೆಯ ಸಮಯ ದೊರೆತರೂ ಮಧ್ಯದಲ್ಲಿ ತಿಪಟೂರು ಮತ್ತಿತರ ಪ್ರದೇಶಗಳಲ್ಲಿ ಇಳಿದು ತಮ್ಮ ಗೆಳೆಯರು ಮತ್ತು ಕಾರ್ಯಕರ್ತರನ್ನು ಭೇಟಿಯಾಗಿ ಮುಂದೆ ಸಾಗುತ್ತಿದ್ದರು.

ಅವರು ರಾಜ್ಯ ಕಾರ್ಯದರ್ಶಿಯಾಗಿದ್ದಾಗ ಬಿರುಗಾಳಿಯಂತೆ ಪ್ರವಾಸ ಮಾಡುತ್ತಿದ್ದರು. ಪಾದಚಾರಿಯಾಗಿ ಸೈಕಲ್ಲು, ಸ್ಕೂಟರು, ಸರಕಾರಿ ಬಸ್ಸು ಮುಂತಾದ ಎಲ್ಲ ಸಾರ್ವಜನಿಕ ಸಂಚಾರ ವ್ಯವಸ್ಥೆಗಳನ್ನೂ ಬಳಸುತ್ತಿದ್ದರು. ರಾತ್ರಿಯಲ್ಲಿ ಕಾರ್ಯಕರ್ತರ ಮನೆಗಳಲ್ಲಿ ಉಳಿದುಕೊಳ್ಳುತ್ತಿದ್ದರು.ಅನಂತಕುಮಾರರಿದ್ದಲ್ಲಿ ಸರಸ, ವಿನೋದಮಯ ವಾತಾವರಣವಿರುತ್ತಿತ್ತು. ಚಹಾ, ತಿಂಡಿ, ಪುರಿಗಳಿಗೆ ಎಂದೂ ಕೊರತೆಯಿರುತ್ತಿರಲಿಲ್ಲ. ಅವರು ಕರ್ನಾಟಕದ ಎಲ್ಲ ಜಿಲ್ಲೆಗಳನ್ನೂ ಪ್ರವಾಸ ಮಾಡಿ ಅತಿ ದೊಡ್ಡ ಕಾರ್ಯಕರ್ತರ ಪಡೆಯನ್ನು ಸೃಷ್ಟಿಸಿದರು. ತಾವು ಸ್ವತಃ ರಾಷ್ಟ್ರಮಟ್ಟದ ನಾಯಕರಾಗಿ ಬೆಳೆದು ನಮ್ಮಂತಹ ಅನೇಕರನ್ನೂ ಬೆಳೆಸಿದರು.

ವಿದ್ಯಾರ್ಥಿ ದೆಸೆಯಲ್ಲಿಯೂ ಅವರದು ಬಿಡುವಿಲ್ಲದ ಜೀವನ. ಪ್ರತಿ ವರ್ಷ ಪರಿಷತ್ತಿನ ಸಮ್ಮೇಳನಗಳನ್ನು ಸಂಘಟಿಸುತ್ತಿದ್ದರು. ಹುಬ್ಬಳ್ಳಿ, ಮೈಸೂರು ಮತ್ತು ಶಿವಮೊಗ್ಗಗಳಲ್ಲಿ ರಾಜ್ಯ ಸಮಾವೇಶಗಳನ್ನು ಯಶಸ್ವಿಯಾಗಿ ನಡೆಸಿದರು. ಬೆಂಗಳೂರಿನಲ್ಲಿ ಅಖಿಲ ಭಾರತ ಸಮಾವೇಶವನ್ನು ಏರ್ಪಡಿಸಿದ್ದರು. ಈ ಸಮಾವೇಶದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಚೋ ರಾಮಸ್ವಾಮಿಯವರನ್ನು ಎದುರುಗೊಳ್ಳಲು ವಿಮಾನನಿಲ್ದಾಣಕ್ಕೆ ಹೋಗಿದ್ದವನು ನಾನೇ. ಆದರೆ, ನನಗೆ ಅವರನ್ನು ಗುರುತಿಸಲು ಸಾಧ್ಯವಾಗದೆ ಹಿಂತಿರುಗಿ ಪರಿಷತ್ತಿನ ಮುಖಂಡರಿಂದ ಬೈಸಿಕೊಂಡಿದ್ದೆ. ಒಮ್ಮೆ ರಾಜಸ್ಥಾನದಲ್ಲಿ ಸಮಾವೇಶವನ್ನು ಮುಗಿಸಿಕೊಂಡು ಡಾ. ಪಿ. ವಿ. ಕೃಷ್ಣ ಭಟ್ಟರ ನೇತೃತ್ವದಲ್ಲಿ ಮರಳಿ ಬರುವಾಗ ರೈಲಿನಲ್ಲಿ ಸತತವಾಗಿ 24 ಗಂಟೆಗಳ ಕಾಲ ಮೀಟಿಂಗ್ ನಡೆಸಿದ್ದರು. ನಮ್ಮ ಚಿಂತನೆಗಳಿಗೆ ಒಂದು ನಿರ್ದಿಷ್ಟ ಗತಿಯನ್ನು ನೀಡುವ ಕೆಲಸವನ್ನು ಅವರೂ ಅನಂತಕುಮಾರರೂ ಅಂದು ನಡೆಸಿದ್ದರು.

ಅನಂತಕುಮಾರರ ಅಂದಿನ ಎಲ್ಲ ಕೆಲಸಗಳೂ ಮುಂದೆ ಭಾರತೀಯ ಜನತಾ ಪಕ್ಷಕ್ಕೆ ಒಂದು ಸಂಘಟನಾತ್ಮಕ ರೂಪ ನೀಡಲು ಸಹಾಯ ಮಾಡಿದವು. ಮಾನ್ಯ ಯಡಿಯೂರಪ್ಪನವರು ಅರಸೀಕೆರೆಯಿಂದ ನೆಲಮಂಗಲದ ವರೆಗೆ ಪಾದಯಾತ್ರೆಯನ್ನು ಕೈಗೊಂಡಾಗ ಅದರ ಯಶಸ್ಸಿಗೆ ಎಲ್ಲ ವ್ಯವಸ್ಥೆಗಳನ್ನೂ ಮಾಡಿದವರು, ಅನಂತಕುಮಾರರು. ವಿದ್ಯಾರ್ಥಿ ಪರಿಷತ್ತಿನ ಪೂರ್ಣಕಾಲಿಕ ಕಾರ್ಯಕರ್ತನಾಗಿದ್ದರೂ ರಾಜಕೀಯದಲ್ಲಿ ನನಗೆ ಆಸಕ್ತಿಯಿರಲಿಲ್ಲ. ಆದರೂ 1991 ರಲ್ಲಿ ನನ್ನನ್ನು ಸಂಪರ್ಕಿಸಿ ಪಾದಯಾತ್ರೆಯ ಜವಾಬ್ದಾರಿಯನ್ನು ವಹಿಸಿದರು. ಭಾರತೀಯ ಯುವ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯ ಹುದ್ದೆಯನ್ನು ಒಪ್ಪಿಕೊಳ್ಳುವಂತೆಯು ಮನವೊಲಿಸಿದರು. ಮುಂದೆ 2004 ರಲ್ಲಿ ಶಾಸಕನಾಗಿ ಸ್ಪರ್ಧಿಸಲೂ ಅವರ ಒತ್ತಾಸೆ ಮತ್ತು ಪ್ರೋತ್ಸಾಹಗಳೇ ಕಾರಣ ಅನೇಕ ಸಾಹಿತಿಗಳ, ಪತ್ರಕರ್ತರ, ಹಿರಿಯ ನಾಯಕರ ವೈಯಕ್ತಿಕ ಸಂಪರ್ಕವೂ ಇತ್ತು. ಪರಿಷತ್ತಿನಲ್ಲಿ ಪಿ. ವಿ. ಕೃಷ್ಣ ಭಟ್, ಯಶವಂತರಾವ್ ಕೇಲ್ಕರ್ ಮತ್ತು ಬಾಳ ಆಪ್ಟೆಯಂತಹ ಹಿರಿಯರಿಗೆ ಅವರು ಆತ್ಮೀಯರಾಗಿದ್ದರು.

ಪುಟ 4 ರಲ್ಲಿ ಮುಂದುವರೆದಿದೆ

# ಕನ್ನಡದಲ್ಲಿ ಮುಕ್ತ ಜ್ಞಾನ ಮತ್ತು ಮುಕ್ತ ತಂತ್ರಜ್ಞಾನ

**-ಬೇಳೂರು ಸುದರ್ಶನ**

**ತಂ**ತ್ರಜ್ಞಾನದ ಬಗ್ಗೆ ಅಲ್ಪಸ್ವಲ್ಪ ಮಾಹಿತಿ ಹೊಂದಿದ್ದು ಕನ್ನಡದ ಬಗ್ಗೆ ಆಸಕ್ತಿ ಹೊಂದಿರುವ ಎಲ್ಲರಿಗಾಗಿ ಕನ್ನಡದಲ್ಲಿ ಮುಕ್ತಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಚಲಿತ ಬೆಳವಣಿಗೆಗಳನ್ನು ಓದುಗರ ಮುಂದಿಡುವುದು ಈ ನಿರೂಪಣೆಯ ಉದ್ದೇಶ. ಹಲ್ಮಿಡಿ ಶಾಸನವು ಇದುವರೆಗೆ ದೊರೆತಿರುವ ಕನ್ನಡದ ಅತ್ಯಂತ ಹಳೆಯ ಶಾಸನ ಮತ್ತು ಲಿಖಿತ ದಾಖಲೆ. ಕಲ್ಲಿನಲ್ಲಿ ಕೆತ್ತಿರುವ ಈ ಶಾಸನದ ಈ ಅಕ್ಷರಗಳು ಇಂದು ಯೂನಿಕೋಡ್ ಅಕ್ಷರಗಳಾಗಿ ಕಂಪ್ಯೂಟರ್ ಪರದೆಯ ಮೇಲೆ ಮೂಡಿಬರುತ್ತಿವೆ. ಇದು ಕನ್ನಡಲಿಪಿ ಬೆಳೆದು ಬಂದ ದಾರಿಯ ಸ್ಥೂಲ ಚಿತ್ರ. ಹಲ್ಮಿಡಿ ಶಾಸನದಿಂದ ಯೂನಿಕೋಡ್ ವರೆಗೆ ನಮ್ಮ ಕನ್ನಡ ತಂತ್ರಜ್ಞಾನ ಮತ್ತು ಮುಕ್ತ ಜ್ಞಾನ ಹೇಗೆ ಮುಂದುವರೆದುಕೊಂಡು ಬಂದಿದೆ ಅನ್ನುವ ಒಂದು ಭಾಗ ಮಾತ್ರ ಇಂದಿನ ಲೇಖನದ ವಸ್ತು.



**ಕನ್ನಡ ಗಣಕಲೋಕದ ಪಿತಾಮಹ ಶ್ರೀ ಕೆ.ಪಿ. ರಾವ್**

### ಇಬ್ಬರು ಪ್ರಾತಃಸ್ಮರಣೀಯರು

ಕನ್ನಡ ಗಣಕದ ಪಿತಾಮಹ ಅಂತ ಹೇಳಿ ಪ್ರಸಿದ್ಧರಾಗಿರುವ ನಾಡೋಜ ಶ್ರೀ ಕೆ .ಪಿ .ರಾವ್, ಇವರು ನಮಗೆಲ್ಲ ಪ್ರಾತಃಸ್ಮರಣೀಯರು. ಕನ್ನಡವನ್ನು ಗಣಕದಲ್ಲಿ ಮೂಡಿಸುವುದು ಹೇಗೆ? ಕನ್ನಡ ಕೀಲಿಮಣೆ ಎಂದರೇನು ಎಂಬುದನ್ನು ಅವರು ಸುಮಾರು ಐದು ದಶಕಗಳ ಹಿಂದೆಯೇ ರೂಪಿಸಿದರು. ಇವತ್ತಿಗೂ ಕೂಡ ಅವರು ಅಭಿವೃದ್ಧಿಪಡಿಸಿದ ಕೀಲಿಮಣೆಯೇ ಅಧಿಕೃತವಾಗಿ ಉಳಿದಿದೆ.. ಕರ್ನಾಟಕ ಸರ್ಕಾರದ ಅಧಿಕೃತ ಕೀಲಿಮಣೆ, ಕ ಗ ಪ ಕೀಲಿಮಣೆಯು ಮೂಲತಃ ಕೆ ಪಿ ರಾವ್ ಅವರ ಕೀಲಿಮಣೆಯೇ ಆಗಿದೆ. ಒಂದೆರಡು ಸಣ್ಣ ಬದಲಾವಣೆಗಳೊಂದಿಗೆ ಕೆ ಪಿ ರಾವ್ ಅವರ ಕೀಲಿಮಣೆಯೇ ಇವತ್ತಿಗೂ ಕೂಡ ಎಲ್ಲ ಕಡೆ ಬಳಕೆಯಲ್ಲಿದೆ. ಇದು ಅತಿ ಸುಲಭವಾಗಿ ಬಳಸಬಹುದಾದ ಒಂದು ಕೀಲಿಮಣೆ.

ವಿಶ್ವವ್ಯಾಪಿ ಜಾಲ (World Wide Web) ವನ್ನು ಕಂಡುಹಿಡಿದ ಟಿಮ್ ಬರ್ನರ್ಸ್ ಲೀ ಕೂಡ ಇನ್ನೊಬ್ಬ ಪ್ರಾತಃಸ್ಮರಣೀಯ ವ್ಯಕ್ತಿ. ಇವರು ವಿಶ್ವವ್ಯಾಪಿ ಜಾಲವನ್ನು ಸೃಷ್ಟಿಸುವುದಕ್ಕಿಂತ ಮೊದಲೇ ಅಂತರ್ಜಾಲ ವ್ಯವಸ್ಥೆಯಿತ್ತು. ಆದರೆ ಇವರು ವಿಶ್ವವ್ಯಾಪಿ ಅಂತರ್ಜಾಲದ ಪ್ರೋಟೋಕಾಲ್ ಸಿದ್ಧಪಡಿಸಿ ಅದನ್ನು ಜಗತ್ತಿಗೆ ಮುಕ್ತತಂತ್ರಜ್ಞಾನವನ್ನಾಗಿ ನೀಡಿದರು. ಮುಕ್ತತಂತ್ರಜ್ಞಾನದ ಪರಿಕಲ್ಪನೆ ಟಿಮ್ ಬರ್ನರ್ಸ್ ಲೀಯವರಿಂದಲೇ ಪ್ರಾರಂಭವಾಯಿತೆನ್ನಬಹುದು.

ಅಂತರ್ಜಾಲಯುಗದ ಪ್ರಾರಂಭದಲ್ಲಿಯೇ ಅವರು "ಶಿಕ್ಷಣ ನೀಡುವವರು ತಮ್ಮೆಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ನೇರವಾಗಿ ಬೃಹತ್ತಾದ ಮಾಹಿತಿಯ ಪೂರೈಕೆ ಮಾಡುತ್ತಾರೆ ಎಂಬ ನಿರೀಕ್ಷೆ ನನ್ನದು. ಅದರಲ್ಲಿರುವ ಮಾಹಿತಿಗಳು ಹೆಚ್ಚಾಗಿ ಅಭಿವೃದ್ಧಿ ಶೀಲ ದೇಶಗಳಿಗೆ ಉಚಿತವಾಗಿಯೇ ಸಿಗಬೇಕು ಎನ್ನುವುದು ನನ್ನ ಅಪೇಕ್ಷೆ. ಏಕೆಂದರೆ, ಅವರೆಲ್ಲ ಈ ಮಾಹಿತಿಗಳನ್ನು ಬೇರೆ ವಿಧಾನದಲ್ಲಿ ಪಡೆಯುವುದು ಕಷ್ಟ" ಎಂದು ಹೇಳಿದ್ದರು. ಇರುವ ಎಲ್ಲ ಮಾಹಿತಿಗಳನ್ನು ತತ್‌ಸಾಮಯಿಕಗೊಳಿಸಲು ಸಾಕಷ್ಟು ಕಾಲಾವಧಿ ಮತ್ತು ಶ್ರಮ ಬೇಕಾಗುತ್ತದೆ. ರೂಪಿಸುವುದಕ್ಕಿಂತ ಹೆಚ್ಚಿನ ಪ್ರಯತ್ನ ಇದನ್ನು ಸುಧಾರಿಸಲು ಬೇಕಾಗುತ್ತದೆ.

ಇಂತಹ ಮೇಧಾವಿಗಳ ಕೊಡುಗೆಯು ಶೈಕ್ಷಣಿಕ ಪ್ರಕ್ರಿಯೆಗೆ ಎಷ್ಟು ಅಗತ್ಯ ಎಂಬುವುದು ಅರಿವಿಗೆ ಬರುತ್ತದೆ. ವಿಶ್ವವಿದ್ಯಾಲಯವೆನ್ನುವುದು ಅದರ ಗ್ರಂಥಾಲಯಕ್ಕಿಂತ ಮಿಗಿಲು ಎನ್ನುವುದಾದರೆ ಅಂತರ್ಜಾಲವೂ ಒಂದು ಜಾಗತಿಕ ವಿಶ್ವವಿದ್ಯಾಲಯ ಆಗಬೇಕು ಎಂದು ಟಿಮ್ ಬರ್ನರ್ಸ್ ಲೀ ಯವರು ಕಲ್ಪಿಸಿಕೊಂಡಿದ್ದರು.

### ಅಂತರ್ಜಾಲದಲ್ಲಿ ಮುಕ್ತಜ್ಞಾನ

ಅಂತರ್ಜಾಲದ ದುರ್ಬಳಕೆ ಕೂಡ ಆಗುತ್ತಿದೆ ಎನ್ನುವುದನ್ನು ನಾವು ಗಮನಿಸಿದ್ದೇವೆ. ಆದರೆ ಮುಖ್ಯತಃ ಇಂಟರ್‌ನೆಟ್ ವಿಶ್ವವ್ಯಾಪಿ ಜಾಲವು ಜ್ಞಾನದ ಹಂಚಿಕೆಗೆ ಬಳಕೆಯಾಗುತ್ತಿದೆ; ಅದರಲ್ಲೂ ಕೂಡ ಮುಕ್ತ ಜ್ಞಾನದ ಹಂಚಿಕೆಗೆ ವ್ಯಾಪಕವಾಗಿ ಬಳಕೆಯಾಗುತ್ತಿದೆ ಎಂಬುದನ್ನೂ ಗಮನಿಸಬೇಕು.

ಮುಕ್ತಜ್ಞಾನದ ಕಲ್ಪನೆಯು ನಮ್ಮ ಪರಂಪರೆಗೆ ಹೊಸದೇನಲ್ಲ. ನಮ್ಮ ಋಷಿಮುನಿಗಳೆಲ್ಲರೂ ತಮ್ಮ ಜ್ಞಾನವನ್ನು ಮುಕ್ತವಾಗಿಯೇ ಕೊಟ್ಟಿದ್ದಾರೆ. ಕೆಲವು ಶತಮಾನಗಳ ಹಿಂದೆ ಮುದ್ರಣ ತಂತ್ರಜ್ಞಾನ ಪರಿಚಯವಾಯಿತು. ಇದರ ಜೊತೆಗೆ ಹಕ್ಕು ಸ್ವಾಮ್ಯದ ವಿಚಾರ ಹುಟ್ಟಿಕೊಂಡಿತು. ಇದು ಪಾಶ್ಚಾತ್ಯ ಪರಿಕಲ್ಪನೆ. ಭಾರತೀಯರಲ್ಲಿ ಜ್ಞಾನದ ನಕಲು ಎಂಬ ವಿಚಾರವೇ ಇರಲಿಲ್ಲ. ಸುತ್ತ ಮುತ್ತ ಜಗತ್ತನ್ನು ಗಮನಿಸಿ ನಾವು ಪಡೆದಿರುವ ಜ್ಞಾನವನ್ನು ಸೂತ್ರರೂಪದಲ್ಲಿ ಸಮಾಜಕ್ಕೆ ಕೊಡುಗೆಯಾಗಿ ನೀಡುವುದು ನಮ್ಮ ಪದ್ಧತಿ.

ಜ್ಞಾನವು ಸಮಾಜಕ್ಕೆ ಸೇರಿದ್ದು ಎಂಬುದು ಭಾರತೀಯ ಪರಿಕಲ್ಪನೆ.

ಪ್ರತಿಯೊಂದು ಪುಸ್ತಕದ ಪುಟವನ್ನು ತೆರೆದಾಗಲೂ ಅದರಲ್ಲಿರುವ ಜ್ಞಾನವು ಮುಕ್ತವೇ ಅಲ್ಲವೇ ಎಂಬ ವಿವರ ದೊರೆಯುತ್ತದೆ. ಅದೇ ರೀತಿ, ಒಂದು ಜಾಲತಾಣವೂ ಮುಕ್ತವೇ ಅಲ್ಲವೇ ಎನ್ನುವುದು ಅದನ್ನು ತೆರೆದಾಗ ತಿಳಿಯುತ್ತದೆ. ಜಾಲತಾಣದಲ್ಲಿ ನಿಮಗೆ ದೊರೆಯುವ ಎಲ್ಲ ಮಾಹಿತಿಗಳನ್ನೂ ಮುಕ್ತವಾಗಿ ಬಳಸಿಕೊಳ್ಳಬಹುದು. ನಾವು 2015 ರಲ್ಲಿ ಪ್ರಾರಂಭಿಸಿ 2016 ರಲ್ಲಿಉದ್ಘಾಟನೆ ಮಾಡಿದ "ಭಾರತವಾಣಿ" ಎನ್ನುವುದು ಮುಕ್ತಜ್ಞಾನದ ಒಂದು ಉದಾಹರಣೆ. ಇದರಲ್ಲಿ ನಾವು ಸುಮಾರು 400 ಭಾರತೀಯ ಭಾಷೆಗಳ ಜ್ಞಾನವನ್ನು ಸಂಗ್ರಹಿಸಿ ಕೊಡಬೇಕು ಎಂಬ ಗುರಿಯನ್ನುಇಟ್ಟುಕೊಂಡಿದೆವು.

ಈಗ ಸುಮಾರು 95 ಭಾಷೆಗಳಲ್ಲಿ ಒಂದಲ್ಲಒಂದು ಜ್ಞಾನಸಂಗ್ರಹ ಅದರಲ್ಲಿದೆ. ಇಲ್ಲಿ ನೀವು ಕನ್ನಡವೂ ಸೇರಿದಂತೆ ಅನೇಕ ಭಾರತೀಯ ಭಾಷೆಗಳ ಆರು ವಿಭಾಗಗಳ ಪುಸ್ತಕಗಳು ಸಿಗುತ್ತವೆ. 400 ಕ್ಕೂ ಹೆಚ್ಚು ಶಬ್ದಕೋಶಗಳು ಮತ್ತು ಪದಕೋಶಗಳು, ಪಠ್ಯಪುಸ್ತಕಗಳು, ಜ್ಞಾನಕೋಶಗಳು, ವಿಶ್ವಕೋಶಗಳು, 1500 ಕ್ಕೂ ಹೆಚ್ಚು ಭಾರತೀಯ ಭಾಷೆಗಳ ಕಲಿಕೆಯ ಪುಸ್ತಕಗಳು ಇಲ್ಲಿವೆ.

ಪುಟ 5 ರಲ್ಲಿ ಮುಂದುವರೆದಿದೆ

# ಕಾರ್ಯಕರ್ತರ ಪಡೆಯನ್ನು ಬೆಳೆಸಿದ ಅಸಾಮಾನ್ಯ ನಾಯಕ

ಪುಟ 3 ರಿಂದ

ಭಾರತೀಯ ಜನತಾ ಪಕ್ಷವನ್ನು ಸೇರಿದ ನಂತರ ಅದ್ವಾನಿಯವರ ಮಾರ್ಗದರ್ಶನದಲ್ಲಿ ಬೆಳೆದರು. ದಾಸೇ ಗೌಡರು, ಗಿರೀಶ್ ಪಟೇಲ್, ರಾಜು ಗೋಖಲೆ, ವಿಷ್ಣುಕಾಂತ ಚಟಪಲ್ಲಿ ಅಚ್ಯುತ ಲಿಮಯೆ, ದತ್ತಾತ್ರೇಯ ಹೊಸಬಾಳೆ, ಎಂ ಪಿ ಕುಮಾರ್, ಸಚ್ಚಿದಾನಂದ ಹೆಗಡೆ, ವಿಶ್ವೇಶ್ವರ ಹೆಗಡೆ, ಅರವಿಂದ ಲಿಂಬಾವಳಿ, ಸಿ ಟಿ ರವಿ, ಅನಿಲ್ ಸಹಸ್ರಬುದ್ಧೆ, ಕೃಷ್ಣಯ್ಯ ಶೆಟ್ಟರು, ದಾವಣಗೆರೆಯ ಶ್ರೀನಿವಾಸ ಮುಂತಾದ ಅನೇಕ ಹಿರಿಕಿರಿಯ ಕಾರ್ಯಕರ್ತರ ಪಡೆ ಅನಂತಕುಮಾರರ ಹತ್ತಿರವಿತ್ತು. ಆ ಸಮಯದಲ್ಲಿ ಗೋವಿಂದಾಚಾರ್ಯರು ವಿದ್ಯಾರ್ಥಿ ಪರಿಷತ್ತಿನ ದಕ್ಷಿಣ ಭಾರತದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು.

ಮುಂದೆ ಸಂಘದ ಆದೇಶದಂತೆ ರಾಜಕೀಯ ಪ್ರವೇಶ ಮಾಡಿದ ಅವರು ಭಾರತೀಯ ಜನತಾ ಪಕ್ಷವನ್ನು ಅಧಿಕಾರಕ್ಕೆ ತರಲು ಬಿಡುವಿಲ್ಲದಂತೆ ಶ್ರಮಿಸಿದರು. ಸೈಕಲ್, ಬಸ್ಸು , ರೈಲುಗಳ ಮೂಲಕ ಎಲ್ಲ 224 ಕ್ಷೇತ್ರಗಳನ್ನೂ ಪ್ರವಾಸ ಮಾಡಿ ಚುನಾವಣಾ ಪ್ರಚಾರ ಮಾಡಿದರು. ಅವರು ಯಾವ ಕೆಲಸವನ್ನು ಮಾಡಲೂ ಸಿದ್ಧರಿದ್ದರು, ಅನೇಕ ಬಾರಿ ಕೆಲಸಗಳನ್ನು ಅವರೇ ಮೈ ಮೇಲೆ ಎಳೆದುಕೊಳ್ಳುತ್ತಿದ್ದರು.

ಅನಂತಕುಮಾರರು ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿಯಾದ ನಂತರ ಹೆಚ್ಚೂ ಕಡಿಮೆ ಎಲ್ಲ ಪ್ರಮುಖ ರಾಜ್ಯಗಳ ಚುನಾವಣಾ ಪ್ರಭಾರಿಯಾಗಿ ಕಾರ್ಯ ನಿರ್ವಹಿಸಿದರು. ಆ ಎಲ್ಲ ರಾಜ್ಯಗಳಲ್ಲಿ ಪಕ್ಷದ ಸರಕಾರವು ಅಧಿಕಾರಕ್ಕೆ ಬರಲು ಕಾರಣರಾದರು.

ವೆಂಕಟಗಿರಿ ಗೌಡರ ನಂತರ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಅನಂತಕುಮಾರರು ಸ್ಪರ್ಧಿಸಿ ಗೆದ್ದರು, ಕೇಂದ್ರದಲ್ಲಿ ಮಂತ್ರಿಯೂ ಆದರು. ಈ ಅವಧಿಯಲ್ಲಿ ಅವರು ಕೇಂದ್ರದಲ್ಲಿ ಕರ್ನಾಟಕದ ಸಮರ್ಥ ಪ್ರತಿನಿಧಿಯಾಗಿದ್ದರು. ಕಾವೇರಿ ಜಲಮಂಡಳಿ, ಬೆಂಗಳೂರು ಮೆಟ್ರೋ, ನದಿ ನೀರಿನ ಹಂಚಿಕೆ, ಮುಂತಾದ ಎಲ್ಲ ವಿಷಯಗಳಲ್ಲಿ ರಾಜ್ಯದ ಹಿತವನ್ನು ಕಾಪಾಡಲು ರಾಜ್ಯ ಸರಕಾರಗಳು ಅನಂತಕುಮಾರರ ನೆರವನ್ನು ಪಡೆದುಕೊಂಡಿದ್ದವು.

ಮಂತ್ರಿಯಾಗಿ ನಾವು ಅವರನ್ನು ಬೇವು ಲೇಪಿತ ಯೂರಿಯಾ ಮತ್ತು ಜನೌಷಧಿ ಯೋಜನೆಗಳಿಗಾಗಿ ಸದಾ ಸ್ಮರಿಸಿಕೊಳ್ಳಬೇಕು. ಬಲಿಷ್ಠವಾಗಿದ್ದ ರಸಗೊಬ್ಬರ ಮತ್ತು ಮೆಡಿಕಲ್ ಲಾಬಿಗಳನ್ನು ಎದುರು ಹಾಕಿಕೊಂಡು ಇಂತಹ ಜನಪರ ಯೋಜನೆಗಳನ್ನು ಜಾರಿಗೆ ತರುವುದು ಸುಲಭವಲ್ಲ.

ವೈಯಕ್ತಿಕವಾಗಿ ನನಗೆ ಅನಂತಕುಮಾರರ ಜೊತೆ ಸುಮಾರು ನಲವತ್ತು ವರ್ಷಗಳ ಆತ್ಮೀಯ ಸಂಬಂಧವಿತ್ತು. ನನ್ನ ಕ್ಷೇತ್ರದಲ್ಲಿ ಕೊಬ್ಬರಿಯ ಬೆಲೆ ಕುಸಿತವಾಗಿ ಬೆಳೆಗಾರರು ದುಃಸ್ಥಿತಿಯಲ್ಲಿದ್ದಾಗ ನಾನು ಬೆಂಬಲ ಬೆಲೆಯನ್ನು ಹೆಚ್ಚಿಸುವಂತೆ ದೆಹಲಿಗೆ ನಿಯೋಗವನ್ನು ಕೊಂಡೊಯ್ದಿದ್ದೆ. ಆಗ ಅವರು ನಮ್ಮನ್ನು ಅಮಿತ್ ಶಾ ರೊಂದಿಗೆ ಭೇಟಿ ಮಾಡಿಸಿ, ಬೆಂಬಲ ಬೆಲೆಯನ್ನು 6000 ರೂಪಾಯಿಗಳಿಂದ 10000 ರೂಪಾಯಿಗಳಿಗೆ ತತ್ ಕ್ಷಣದಿಂದ ಹೆಚ್ಚಿಸುವ ನಿರ್ಧಾರಕ್ಕೆ ಕಾರಣರಾದರು. ಅದೇ ರೀತಿ ಜಿಎಸ್‌ಟಿ ಕಡಿಮೆ ಮಾಡಲೂ ಕೂಡ ನಾವು ಮಾಡಿಕೊಂಡ ಮನವಿಗಳಿಗೆ ಅವರು ಆ ಕೂಡಲೇ ಸ್ಪಂದಿಸಿದ್ದರು. ಸಚಿವರಾಗಿದ್ದಾಗಲೂ ನಮ್ಮೊಂದಿಗೆ ಸದಾ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುತ್ತಿದ್ದರು.

ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಅನಂತಕುಮಾರರು ತಂದೆಯ ಶಿಸ್ತು ಮತ್ತು ಯೋಜಿತವಾಗಿ ಕೆಲಸ ಮಾಡುವ ಗುಣಗಳನ್ನು ಪಡೆದುಕೊಂಡಿದ್ದರು. ಆದರೆ ಅವರಿಗೆ ಯಾರ ಕೃಪಾಛತ್ರವೂ ಇರಲಿಲ್ಲ. ಸ್ವಂತ ಸಾಮರ್ಥ್ಯ, ಅಪಾರ ಪರಿಶ್ರಮ ಮತ್ತು ಸಂಘಟನೆಯ ಜೊತೆಗೆ ದೀರ್ಘಕಾಲದ ನಿರಂತರ ಸಂಪರ್ಕಗಳ ಮೂಲಕ ಅವರು ದೇಶದ ಮುಂಚೂಣಿಯ ನಾಯಕರಾಗಿ ಬೆಳೆದರು. ಸಂಘವು ಅವರಿಗೆ ಪಕ್ಷಕ್ಕಾಗಿ ಕೆಲಸ ಮಾಡುವಂತೆ ಆದೇಶ ನೀಡಿದ್ದರೂ ರಾಜಕೀಯವನ್ನು ಅವರು ಸ್ವಂತ ಇಚ್ಛೆಯಿಂದ ಆಯ್ದುಕೊಂಡವರು.

ಸಾಮಾನ್ಯ ಹಿನ್ನೆಲೆಯಿಂದ ದೇಶದ ಉನ್ನತ ನಾಯಕರಲ್ಲೊಬ್ಬರಾಗಿ ಬೆಳೆದ ಅನಂತಕುಮಾರರು ನಮ್ಮ ನಡುವೆ ಇನ್ನಷ್ಟು ದಿನ ಇರಬೇಕಾಗಿತ್ತು. ಆದರೆ ತಾವು ಕೈಗೊಂಡ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗಲು ಸಾವಿರಾರು ಕಾರ್ಯಕರ್ತರ ಪಡೆಯನ್ನು ಹಿಂದೆ ಬಿಟ್ಟು ಹೋಗಿದ್ದಾರೆ. ಅನಂತಕುಮಾರರ ಪತ್ನಿ ತೇಜಸ್ವಿನಿಯವರೂ ಅನಂತಕುಮಾರರ ಸಾಮಾಜಿಕ ಸೇವೆಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

# ಅನಂತಪಥ ಮಾಸಪತ್ರಿಕೆಯ ಬಿಡುಗಡೆ



**ಅ**ನಂತಪಥ ಮಾಸಪತ್ರಿಕೆಯ **ಡಿಸೆಂಬರ್** 2021 ಸಂಚಿಕೆಯನ್ನು ಕಳೆದ **ಡಿಸೆಂಬರ್** 22 ರಂದು ಬಿಡುಗಡೆ ಮಾಡಲಾಯಿತು. ಈ ಸಂಚಿಕೆಯನ್ನು ಬಿಡುಗಡೆ ಮಾಡಲು ಕರ್ನಾಟಕ ಮುಖ್ಯಮಂತ್ರಿಯವರ ಇ-ಆಡಳಿತ ಸಲಹೆಗಾರರಾದ ಶ್ರೀ ಬೇಳೂರು ಸುದರ್ಶನರವರು ಆಗಮಿಸಿದ್ದರು. ತಾವು ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರಾಗಿದ್ದಾಗ ತಮ್ಮ ಹಿರಿಯ ಸ್ನೇಹಿತರೂ ಮಾರ್ಗದರ್ಶಕರೂ ಆಗಿದ್ದ ಶ್ರೀ ಅನಂತಕುಮಾರ್ ಅವರ ಒಡನಾಟವನ್ನು ಸುದರ್ಶನ ಸ್ಮರಿಸಿಕೊಂಡರು. ಅನಂತಕುಮಾರರ ಜೀವನ, ವ್ಯಕ್ತಿತ್ವ, ಸಾಧನೆಗಳು ಅನಂತಪಥ ಪತ್ರಿಕೆಯ ಲೇಖನಗಳಲ್ಲಿ ಅತ್ಯುತ್ತಮವಾಗಿ ಬಿಂಬಿತವಾಗುತ್ತಿವೆಯೆಂದು ಅಭಿಪ್ರಾಯಪಟ್ಟರು. ಪತ್ರಿಕೆಯ ಸಂಪಾದಕಮಂಡಳಿಯ ಶ್ರೀ ಟಿ.ಎಸ್. ಗೋಪಾಲ್, ಶ್ರೀ ಜನಾರ್ದನ ತುಂಗರವರೂ ಕಾರ್ಯಕರ್ತರಾದ ಶ್ರೀ ಕೇಶವ ಪ್ರಸಾದ್ ಮತ್ತು ತಂತ್ರಜ್ಞ ಶ್ರೀ ಪೂರ್ಣಪ್ರಜ್ಞರವರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಇದೇ ಸಂದರ್ಭದಲ್ಲಿ ಕನ್ನಡದಲ್ಲಿ ಮುಕ್ತ ಜ್ಞಾನ ಮತ್ತು ಮುಕ್ತ ತಂತ್ರಜ್ಞಾನ ಎಂಬ ವಿಷಯವನ್ನು ಕುರಿತು ಸುದರ್ಶನ ಉಪನ್ಯಾಸ ಮಾಡಿದರು. ಆ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಪುಟ 4 ರಿಂದ

# ಕನ್ನಡದಲ್ಲಿ ಮುಕ್ತ ಜ್ಞಾನ ಮತ್ತು ಮುಕ್ತ ತಂತ್ರಜ್ಞಾನ

## ಅಂತರ್ಜಾಲದಲ್ಲಿ ಮುಕ್ತಜ್ಞಾನ

ಕರ್ನಾಟಕ ಸರ್ಕಾರದ ಅಂಕೀಕರಣದ ಮಹತ್ವದ ಯೋಜನೆ, “ಕಣಜ” ಅದರಲ್ಲಿ ಎಂಟು ನಿಘಂಟುಗಳಿವೆ. “ಬರಹ” ಎಂಬ ಕನ್ನಡತಂತ್ರಾಂಶವನ್ನು ರೂಪಿಸಿದ ಶೇಷಾದ್ರಿ ವಾಸು ಅವರ ಜಾಲತಾಣದಲ್ಲಿ ಏಳು ನಿಘಂಟುಗಳಿವೆ. ಹಾಗೆಯೇ “ಸಂಚಯ”, ಇನ್ನೊಂದು ಸಾರ್ವಜನಿಕ ಸಾಮುದಾಯಿಕ ಪ್ರಯತ್ನ. ಇದರಲ್ಲಿ ನೀವು ದಾಸಸಂಚಯ, ವಚನ ಸಂಚಯ, ಸರ್ವಜ್ಞ ಸಂಚಯ, ರನ್ನ, ಜನ್ನ, ಕವಿ ರಾಜ ಮಾರ್ಗ, ವಡ್ಡಾರಾಧನೆ, ಪದ ಸಂಚಯ ಇವೆಲ್ಲವನ್ನೂ ನೀವು ಇಲ್ಲಿ ಮುಕ್ತವಾಗಿ ನೋಡಬಹುದು. “ಭಾರತವಾಣಿ” ಮೊಬೈಲ್ ಆಪ್‌ನಲ್ಲಿ ಯಾವುದೇ ಭಾಷೆಯ ಲಿಪಿಯನ್ನು ನಿಮ್ಮ ಭಾಷೆಗೆ ಪರಿವರ್ತಿಸಿಕೊಳ್ಳಬಹುದು, ನಿಮ್ಮ ಭಾಷೆಯ ಪದಕ್ಕೆ ಸಮಾನಾರ್ಥಕ ಪದವನ್ನು ಹುಡುಕಬಹುದು. ಪ್ರವಾಸ/ಪ್ರಯಾಣಗಳ ಕಾಲದಲ್ಲಿ

ಇದು ಬಹಳ ಉಪಯುಕ್ತ.

“ವಿಕಿಪೀಡಿಯಾ” ಇನ್ನೊಂದು ಮುಕ್ತಜ್ಞಾನ ಕೋಶ. ಇದನ್ನು ಬಳಸುವಾಗ ಎಚ್ಚರಿಕೆಯಿರಲಿ, ಏಕೆಂದರೆ ಒಂದೇ ವಿಷಯದ ಮೇಲೆ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಬೇರೆ ಬೇರೆ ರೀತಿಯ ಮಾಹಿತಿ ಇರುವ ಸಂಭವಗಳಿವೆ. ಕೇಂದ್ರಸರಕಾರವು ವಿಕಾಸ್‌ಪೀಡಿಯಾ ಎಂಬ ಜಾಲತಾಣವನ್ನೂ ಹೊಂದಿದೆ. ಇದರಲ್ಲಿ ಅನೇಕ ಸಮಕಾಲೀನ ಮಾಹಿತಿಗಳು ದೊರೆಯುತ್ತವೆ. ಯೂಟ್ಯೂಬ್ ಮತ್ತು ಅನೇಕ ಖಾಸಗಿ ಆಪ್‌ಗಳ ಮೂಲಕ ಅನೇಕ ಕ್ಷೇತ್ರಗಳ ಜ್ಞಾನವು ಇಂದು ಮುಕ್ತವಾಗಿ ಲಭಿಸುತ್ತಿದೆ. ಅಂತರ್ಜಾಲದಲ್ಲಿ ದೊರೆಯುವ ಜ್ಞಾನ ಮಾತ್ರ ಮುಕ್ತಜ್ಞಾನ ಎಂದು ಹೇಬೇಕಾಗಿಲ್ಲ. ದಾನಿಗಳು ದೊರೆತರೆ ಅಂತಹ ಜ್ಞಾನವನ್ನು ಮುದ್ರಿಸಿ ಪುಸ್ತಕಗಳ ರೂಪದಲ್ಲಿಯೂ ಹಂಚಿಕೊಂಡರೆ ಅದೂ ಮುಕ್ತಜ್ಞಾನದ ಕೆಲಸವೇ.

## ಆಶಾದಾಯಕ ಭವಿಷ್ಯ

ಆನ್‌ಲೈನಿನಲ್ಲಿ ಕನ್ನಡದ ಬೋಧನಾ ತರಗತಿಗಳು ಇನ್ನೂ ಕಡಿಮೆಯೇ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಭಾರತೀಯ ಭಾಷೆಗಳ ಅಭಿವೃದ್ಧಿಗಾಗಿ ಅಧಿಕೃತ ಸಮಿತಿಯೊಂದನ್ನು ಕೇಂದ್ರಸರಕಾರ ಸ್ಥಾಪಿಸಿದೆ. ಪದ್ಮಶ್ರೀ, ಛಾಮು ಕೃಷ್ಣಮೂರ್ತಿಯವರು ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ.

ಅದೇ ರೀತಿ, ಭಾಷಾ ತಂತ್ರಜ್ಞಾನದ ವಿಷಯದಲ್ಲಿಯೂ ಅನೇಕ ಕೆಲಸಗಳು ನಡೆಯುತ್ತಿವೆ. ಸಾರ್ವಜನಿಕರ ಬಳಕೆಗೆ ಉಪಯೋಗವಾಗುವ ಕೀಲಿಮಣೆ, ಅಕ್ಷರಗಳು (Fonts), ಬೇರೆ ಬೇರೆ ವೇದಿಕೆಗಳಲ್ಲಿ ಕನ್ನಡದ ಬಳಕೆ, ಧ್ವನಿಯನ್ನು ಅಕ್ಷರವಾಗಿ ಪರಿವರ್ತಿಸುವ ತಂತ್ರಜ್ಞಾನ, ಭಾಷಾಂತರ ತಂತ್ರಜ್ಞಾನ ಮುಂತಾದ ಹಲವು ಕ್ಷೇತ್ರಗಳಲ್ಲಿ ಕೆಲಸಗಳು ನಡೆಯುತ್ತಿವೆ. ಇಂದು ಶ್ರೀಲಿಪಿ, ಭರತ, ಕುವೆಂಪು, ಬರಹ, ಗೂಗಲ್ ಮುಂತಾದ ಅನೇಕ ಕೀಲಿಮಣೆ ತಂತ್ರಾಂಶಗಳು ಅಂತರ್ಜಾಲದಲ್ಲಿ ಲಭ್ಯವಿವೆ. ಮುದ್ರಿತ ಹಾಳೆಗಳಲ್ಲಿರುವ ಅಕ್ಷರಗಳನ್ನು ಓದುವ, ಸಂಪಾದಿಸಬಹುದಾದ ಪಠ್ಯವನ್ನಾಗಿ ಪರಿವರ್ತಿಸುವ ತಂತ್ರಾಂಶಗಳೂ ಇವೆ. ಇವುಗಳ ದಕ್ಷತೆಯೂ ಉತ್ತಮವಾಗಿವೆ. ಪಠ್ಯದಿಂದ ಧ್ವನಿಗೆ ಪರಿವರ್ತಿಸುವ ತಂತ್ರಾಂಶಗಳು ದೃಷ್ಟಿವಿಹೀನರಿಗೆ ವರದಾನವಾಗಿವೆ.

ಕನ್ನಡ ಸಂಸ್ಕೃತಿ, ಕನ್ನಡದ ಪರಂಪರೆ, ಕನ್ನಡದ ಜ್ಞಾನ ಪರಂಪರೆ, ಜ್ಞಾನ ಸಂಗ್ರಹ ಇವುಗಳನ್ನು ಪೂರ್ತಿಯಾಗಿ ಹುಡುಕಲು ಸಹಾಯ ಮಾಡುವ ಒಂದು ನಿರ್ದಿಷ್ಟವಾದ ಒಂದುತಂತ್ರಜ್ಞಾನ ಇನ್ನೂ ಅಭಿವೃದ್ಧಿಯಾಗಿಲ್ಲ. “ಇ-ಸಂಧಾನ” ಎಂಬ ಕೇಂದ್ರ ಸರ್ಕಾರದ ಹುಡುಕಾಟದ ಆನ್‌ಲೈನ್ ಸಾಧನ ಕನ್ನಡದಲ್ಲಿ ಇನ್ನೂ ಬಂದಿಲ್ಲ. ಇಲ್ಲಿ ತೆಲುಗು, ತಮಿಳು, ಮಲಯಾಳಿ, ಗುಜರಾತಿ, ಪಂಜಾಬಿ ಈ ಎಲ್ಲ ಭಾಷೆಗಳಿವೆ. ಯಂತ್ರಾನುವಾದವು ಈಗಲೂ ಕೂಡ ಅತಿ ಕಡಿಮೆ ಬೆಳವಣಿಗೆಯನ್ನು ಹೊಂದಿರುವ ತಂತ್ರಜ್ಞಾನ. ಕನ್ನಡದಿಂದ ತೆಲುಗಿಗೆ ಒಂದು ಸೆಕೆಂಡಿಗೆ ಒಂದು ಲಕ್ಷ ವಾಕ್ಯಗಳನ್ನು ಶೇ 90 ರಷ್ಟು ನಿಖರತೆಯಲ್ಲಿ ಅನುವಾದಿಸುವ ತಂತ್ರಾಂಶವನ್ನು ಕನ್ನಡಿಗರೇ ಆದ ಡಾ. ಕಬೀರ್ ನಾರಾಯಣ ಮೂರ್ತಿಯವರು ಆವಿಷ್ಕಾರ ಮಾಡಿದ್ದಾರೆ.

ಕನ್ನಡದಲ್ಲಿ ತಂತ್ರಜ್ಞಾನ ಅಭಿವೃದ್ಧಿಗೆ ಕರ್ನಾಟಕ ಸರಕಾರವು ಯಾವುದೇ ಮಾನದಂಡಗಳನ್ನು ನಿರೂಪಿಸಿಲ್ಲ. ಖಾಸಗಿ ಸಂಸ್ಥೆಗಳು ತಮ್ಮದೇ ಆದ ಮಾನದಂಡಗಳನ್ನು ಇಟ್ಟುಕೊಂಡು ಸಂಶೋಧನೆಗಳನ್ನು ನಡೆಸುತ್ತಿವೆ. ಈ ಅಂತರವನ್ನು ಕಡಿಮೆ ಮಾಡಲು ನಾವು ಕೆಲವು ಮಾನದಂಡಗಳನ್ನು ನಿರೂಪಿಸುವ ಪ್ರಯತ್ನ ಮಾಡುತ್ತಿದ್ದೇವೆ. ಕನ್ನಡ ತಂತ್ರಾಂಶ ಬೆಳವಣಿಗೆಯಲ್ಲಿ ಸರ್ಕಾರ ಮಾತ್ರವಲ್ಲ, ಸಾರ್ವಜನಿಕ ತಂತ್ರಜ್ಞರೂ ಪಾಲ್ಗೊಳ್ಳಬೇಕು ಎಂಬ ಉದ್ದೇಶದಿಂದ ಒಂದು ವೇದಿಕೆಯನ್ನು ನಾವು ಸಾಮಾಜಿಕ ಮಾಧ್ಯಮದ ಮಾದರಿಯಲ್ಲಿ ರೂಪಿಸಿದ್ದೇವೆ. ಇದೂ ಕೂಡ ಸದ್ಯದಲ್ಲೇ ಬಿಡುಗಡೆಯಾಗುವ ಹಂತದಲ್ಲಿದೆ. ಈ ವೇದಿಕೆಯಲ್ಲಿ ಎಲ್ಲಾ ತಂತ್ರಜ್ಞರೂ ಎಲ್ಲ ವಿಷಯಗಳ ಬಗ್ಗೆ ಚರ್ಚೆ ಮಾಡಬಹುದು. ನಮ್ಮಕನ್ನಡಕ್ಕೆ ಬೇಕಾದ ತಂತ್ರಜ್ಞಾನವನ್ನು ಹೇಗೆ ಮಾಡಬೇಕು, ಈ ಹಿನ್ನೆಲೆಯಲ್ಲಿ ನಡೆದಿರುವ ಬೆಳವಣಿಗೆಗಳೇನು, ಮುಂತಾದ ವಿಷಯಗಳನ್ನು ಈ ವೇದಿಕೆಯಲ್ಲಿ ಗಮನಿಸಬಹುದು.

ಕನ್ನಡದಲ್ಲೇ ವೆಬ್ ವಿಳಾಸಗಳು ಇನ್ನೊಂದು ಹೊಸ ಬೆಳವಣಿಗೆ. ಕನ್ನಡದಲ್ಲೇ ಮಿಂಚಂಚೆ ವಿಳಾಸಗಳನ್ನು ಹೊಂದಬಹುದು. ವಿಶ್ವವ್ಯಾಪಿ ಜಾಲದಲ್ಲಿ www.**ಬೇಳೂರುಸುದರ್ಶನ.ಭಾರತ** ಎಂದು ನೀವು ಬೆರಳಚ್ಚಿಸಿದರೆ ನೀವು ನನ್ನ ಜಾಲತಾಣವನ್ನು ಸಂದರ್ಶಿಸಬಹುದು.

ಅದೇರೀತಿ, **ಬೇಳೂರುಸುದರ್ಶನ @ ಬೇಳೂರುಸುದರ್ಶನ.ಭಾರತ** ಇದಕ್ಕೆ

ನೇರವಾಗಿ ನೀವು ನಿಮ್ಮ ಯಾವುದೇ ಇ-ಮೇಲ್ ಐಡಿಯಿಂದ ಪತ್ರ ಕಳುಹಿಸಿದರೆ ಅದು ನನಗೆ ತಲುಪುತ್ತದೆ. ಕೇವಲ ಮಾಹಿತಿ ಕನ್ನಡದಲ್ಲಿದ್ದರೆ ಸಾಲದು, ಮೂಲ ತಂತ್ರಜ್ಞಾನದಲ್ಲಿ ಕೂಡ ಕನ್ನಡ ಇರಬೇಕು ಎಂಬ ಉದ್ದೇಶದಿಂದ ನಡೆಯುತ್ತಿರುವ ಇಂತಹ ಕೆಲಸಗಳ ಹಿಂದೆ ಹಲವು ವರ್ಷಗಳ ಶ್ರಮವಿದೆ. ಕನ್ನಡದಲ್ಲಿ ಕೆಲಸ ಮಾಡುವವರೂ ಕನ್ನಡದಲ್ಲಿಯೇ ವೆಬ್‌ಸೈಟ್ ಗಳನ್ನು ಹೊಂದುವುದು ಒಳ್ಳೆಯದು.

## ಜೀವ ವೈವಿಧ್ಯ ಮತ್ತು ಭಾಷೆ

ನಮ್ಮ ಭಾಷೆ, ನೆಲ, ಜಲ ಎಲ್ಲವನ್ನೂ ಉಳಿಸಿಕೊಳ್ಳುವ ಹೊಣೆ ನಮ್ಮ ಮೇಲಿದೆ. ನಾವು ಯಾವತ್ತೂ ಕನ್ನಡವನ್ನೇ ಬಳಸಬೇಕು. ನಮ್ಮ ಸಾಮಾಜಿಕ ಜಾಲತಾಣ ಪುಟಗಳಲ್ಲಿ ನಾವು ಕನ್ನಡವನ್ನು ಬಳಸಬೇಕು. ಜೀವ ವೈವಿಧ್ಯ ಇರುವಲ್ಲಿ ಭಾಷೆಗಳ ಸಂಖ್ಯೆ ಜಾಸ್ತಿ. ಉದಾಹರಣೆಗೆ ಒರಿಸ್ಸಾ, ಝಾರ್ಖಂಡ, ಛತ್ತೀಸಘಡ ರಾಜ್ಯಗಳಲ್ಲಿ ನಿಮಗೆ ಹೆಚ್ಚು ಹೆಚ್ಚು ಭಾಷೆಗಳೂ ಸಿಗುತ್ತವೆ. ಭಾಷೆಯ ಸಮೃದ್ಧಿಯು ಸಂಸ್ಕೃತಿ, ಜೀವ ವೈವಿಧ್ಯಗಳ ಸಮೃದ್ಧಿಯನ್ನೂ ಸೂಚಿಸುತ್ತದೆ. ಇಂಗ್ಲಿಷ್ ಭಾಷೆಯ ಯಜಮಾನಿಕೆಗೆ ನಾವು ಬಗ್ಗಬಾರದು. ನಮ್ಮ ಭಾಷೆಯು ಎಲ್ಲಾ ಕಡೆಗಳಲ್ಲಿಯೂ ಕಾಣಿಸಬೇಕು.. ಆಗಲೇ ನಮ್ಮ ಭಾಷೆಯ ಬಗ್ಗೆ ನಮ್ಮ ಮುಂದಿನ ಪೀಳಿಗೆಗೆ ಆಸಕ್ತಿ ಬೆಳೆಯುತ್ತದೆ.



**ಬೇಳೂರು ಸುದರ್ಶನ**

ಮುಖ್ಯಮಂತ್ರಿಯವರ ಇ- ಆಡಳಿತ
ಸಲಹೆಗಾರರು ಕರ್ನಾಟಕ ಸರ್ಕಾರ

ದೇಗುಲದರ್ಶನ ಮಾಲಿಕೆ-6

# ಮಂಡ್ಯ ಜಿಲ್ಲೆಯ ಕೆಲವು ದೇವಾಲಯಗಳು







**ದೇ**ಗುಲ ದರ್ಶನ ಮಾಲಿಕೆಯಲ್ಲಿ ಈ ತಿಂಗಳು ಮಂಡ್ಯ ಜಿಲ್ಲೆಯ ಕೆಲವು ದೇವಾಲಯಗಳನ್ನು ಪರಿಚಯ ಮಾಡಿಕೊಡಲಾಗಿದೆ.

ಮದ್ದೂರು ಮತ್ತು ಮಂಡ್ಯ ನಡುವೆ ಇರುವ ಹೊಸಬೂದನೂರಿನಲ್ಲಿ ಹೊಯ್ಸಳದೊರೆ ಮೂರನೆಯ ನರಸಿಂಹನ ಕಾಲದಲ್ಲಿ ನಿರ್ಮಿತವಾದ ಕಾಶೀ ವಿಶ್ವೇಶ್ವರ ಮತ್ತು ಅನಂತಪದ್ಮನಾಭ ಸ್ವಾಮಿಯ ಗುಡಿಗಳಿವೆ. ಹೊಸಬೂದನೂರಿನ ಊರ ಹೊರವಲಯದಲ್ಲಿ ಕಾಶಿವಿಶ್ವೇಶ್ವರ ದೇವಾಲಯವಿದ್ದು ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟಿನಿಂದ ಮೂಲಸ್ವರೂಪದಂತೆ ಜೀರ್ಣೋದ್ಧಾರವಾಗಿದ್ದು, ಆಕರ್ಷಕವಾಗಿದೆ. ಈ ದೇವಾಲಯದ ನವರಂಗದಲ್ಲಿರುವ ಗಣಪತಿ, ಸುಬ್ರಹ್ಮಣ್ಯ ಮತ್ತು ನಂದಿಯ ಶಿಲ್ಪಗಳ ಬಹಳ ಕಲಾತ್ಮಕವಾಗಿ ಮೂಡಿಬಂದಿವೆ.

ಹೊಸಬೂದನೂರಿನ ಗ್ರಾಮದ ನಡುವೆ ಇರುವ ಇದೇ ಕಾಲಘಟ್ಟದಲ್ಲಿ ನಿರ್ಮಿತವಾಗಿರುವ ದೇವಾಲಯ ಅನಂತಪದ್ಮನಾಭ ದೇವಾಲಯ. ಏಕಕೂಟವಾಗಿರುವ ಈ ದೇವಾಲಯದಲ್ಲಿ ವಿಷ್ಣುವಿನ ರೂಪವಾದ ಪದ್ಮನಾಭನ ( ಪದ್ಮ,ಚಕ್ರ,ಗದಾ,ಶಂಖ) ಮೂರ್ತಿಯಿರುವುದು.

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಮೋದೂರಿನಲ್ಲಿ ಒಂಬತ್ತನೆಯ ಶತಮಾನಕ್ಕೆ ಸೇರುವ ಶಿವಲಿಂಗವನ್ನು ಹೊಂದಿರುವ ರಾಮೇಶ್ವರ ದೇವಾಲಯ ಹಾಗೂ ಹದಿನೇಳನೆಯ ಶತಮಾನಕ್ಕೆ ಸೇರುವ ಅಭಯಾಂಜನೇಯ ದೇವಾಲಯಗಳಿವೆ.

ಕೆ.ಆರ್.ಪೇಟೆ ಪಾಂಡವಪುರ ರಸ್ತೆಯಲ್ಲಿ ಸಿಗುವ ಮುರಕನಹಳ್ಳಿಯು ಮಂಡ್ಯ ಜಿಲ್ಲೆ ಒಂದು ಪ್ರಮುಖ ಜೈನ ಕ್ಷೇತ್ರ. ಇಲ್ಲಿರುವ ಪಾರ್ಶ್ವನಾಥ ಬಸದಿಯಲ್ಲಿರುವ ಪಾರ್ಶ್ವನಾಥ ತೀರ್ಥಂಕರರ ಜೈನಬಿಂಬವು ಹೊಯ್ಸಳ ಶೈಲಿಯಲ್ಲಿದ್ದು ಆಕರ್ಷಕವಾಗಿದೆ.

ತಾಲ್ಲೂಕು ಕೇಂದ್ರ ಕೃಷ್ಣರಾಜಪೇಟೆಗೆ ಅತೀ ಸಮೀಪವಿರುವ ಹೊಸಹೊಳಲಿನಲ್ಲಿ ಸುಪ್ರಸಿದ್ಧವಾದ, ಕಲಾತ್ಮಕ ಕೆತ್ತನೆಗಳಿಂದ ಕೂಡಿರುವ ಲಕ್ಷ್ಮೀನಾರಾಯಣ ದೇವಾಲಯವಿದೆ. ತ್ರಿಕೂಟಾಚಲವಾದ ಪ್ರಸ್ತುತ ಹೊಯ್ಸಳ ದೇವಾಲಯದಲ್ಲಿ ಪ್ರಧಾನ ಗರ್ಭಗುಡಿಯಲ್ಲಿ ಲಕ್ಷ್ಮೀನಾರಾಯಣ ಹಾಗೂ ಉಳಿದ ಗರ್ಭಗುಡಿಗಳಲ್ಲಿ ಕ್ರಮವಾಗಿ ಪ್ರಹ್ಲಾದ ವರದ ನರಸಿಂಹ ಮತ್ತು ಕೊಳಲು ಗೋಪಾಲಕೃಷ್ಣರ ಸುಂದರ ಮೂರ್ತಿಗಳಿವೆ. ಈ ದೇವಾಲಯದ ಶಿಖರವು ಬಹಳ ಸೊಗಸಾಗಿ ಮೂಡಿಬಂದಿದೆ.ನಕ್ಷತ್ರಾಕಾರದ ಜಗತಿಯ ಮೇಲೆ ನಿರ್ಮಿತವಾಗಿರುವ ದೇವಾಲಯವು ಪ್ರದಕ್ಷಿಣಾ ಪಥವನ್ನು ಹೊಂದಿದ್ದು, ಹೊರಭಿತ್ತಿಯಲ್ಲಿ ದೇವತೆಗಳ ಮೂರ್ತಿಗಳು ಬಹಳ ಸುಂದರವಾಗಿವೆ. ಹೊಸಹೊಳಲಿನಲ್ಲಿ ಪಾರ್ಶ್ವನಾಥ ಜೈನಬಸದಿಯೂ ಇದೆ.

ಕೆ.ಆರ್.ಪೇಟೆಯಿಂದ ಹದಿನೈದು ಕಿ.ಮೀ.ದೂರದಲ್ಲಿರುವ ಕಿಕ್ಕೇರಿಯಲ್ಲಿ, ಕ್ರಿ.ಶ.1171 ರಲ್ಲಿ ಹೊಯ್ಸಳರ ಕಾಲದಲ್ಲಿ ಬೊಮ್ಮವ್ವೆ ನಾಗತಿಯು ನಿರ್ಮಿಸಿರುವ, ಆಕರ್ಷಕ ಕೆತ್ತನೆಗಳಿಂದ ಕೂಡಿದ ಬ್ರಹ್ಮೇಶ್ವರ ದೇವಾಲಯವಿದೆ. ಏಕಕೂಟವಾದ ಈ ದೇವಾಲಯವು ಸುಂದರವಾದ ಶಿಖರವನ್ನು ಹೊಂದಿದ್ದು ನವರಂಗದಲ್ಲಿ ಬೇಲೂರು, ಹಳೇಬೀಡಿನಲ್ಲಿರುವಂತೆ ಅಂದವಾದ ಮದನಿಕೆಯರ ಮೂರ್ತಿಗಳಿವೆ. ಕಿಕ್ಕೇರಿಯಲ್ಲಿ ಲಕ್ಷ್ಮೀನರಸಿಂಹ ಮತ್ತು ಯೋಗಾನರಸಿಂಹ ಹಾಗೂ ಗ್ರಾಮದೇವತೆ ಕಿಕ್ಕೇರಮ್ಮನ ದೇವಾಲಯಗಳು ಸಹ ಇವೆ.

ಕಿಕ್ಕೇರಿಗೆ ಕೇವಲ ಐದು ಕಿ.ಮೀ. ದೂರದಲ್ಲಿರುವ ಗೋವಿಂದನಹಳ್ಳಿಯಲ್ಲಿ ಹೊಯ್ಸಳರ ಕಾಲದ ಪಂಚಶಿಖರಗಳನ್ನು ಹೊಂದಿರುವ ಅಪರೂಪದ ಪಂಚಲಿಂಗೇಶ್ವರ ದೇವಾಲಯವಿದೆ. ಐದು ಗರ್ಭಗುಡಿಗಳನ್ನು ಹೊಂದಿರುವ ದೇವಾಲಯ.

ಗೋವಿಂದನಹಳ್ಳಿಗೆ ಕೇವಲ ಐದು ಕಿ.ಮೀ.ದೂರದಲ್ಲಿರುವ ಮಾದಾಪುರದಲ್ಲಿ ಹೊಯ್ಸಳರ ಕಾಲದ ಮಹಾಲಿಂಗೇಶ್ವರ ದೇವಾಲಯ ಹಾಗೂ ಗ್ರಾಮ ದೇವತೆ ಕೆಂಕೇರಮ್ಮನ ದೇವಾಲಯಗಳಿವೆ.

**-ಕೆಂಗೇರಿ ಚಕ್ರಪಾಣಿ/ಟಿ.ಎಸ್. ಗೋಪಾಲ್**

**ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ವೀಕ್ಷಿಸಬಹುದು:**

**http://YouTube.com/AnanthkumarPratishthana**





ಪುಟ 2 ರಿಂದ

# ಸಂಸ್ಕೃತಿಯ ತಳಹದಿಯ ಮೇಲೆ ರಾಷ್ಟ್ರನಿರ್ಮಾಣ

ಸುಲಭವಾಗಿ ಹಣ ಮಾಡಬಹುದೆಂದು ಜನರು ರಾಜಕೀಯ ಪ್ರವೇಶಿಸುತ್ತಿದ್ದಾರೆ. ಪಾಶ್ಚಿಮಾತ್ಯ ಜಗತ್ತಿನ ಈ ಅರ್ಥಪರ ನೀತಿಯನ್ನು ನಮ್ಮ ಮನಸ್ಸಿನಿಂದ ಹೊರಹಾಕಬೇಕು. ಇದನ್ನು ಬದಲಾಯಿಸಿ, ಜನಪರ, ಅಭಿವೃದ್ಧಿಪರ, ಜವಾಬ್ದಾರಿಯುತ ರಾಜಕೀಯ, ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಲು ಅನಂತಕುಮಾರರು ಶ್ರಮಿಸಿದರು. ಇದು ಸಾಧ್ಯ. ಆದರೆ ಇದಕ್ಕೆ ಅಪಾರ ಶಕ್ತಿ ಬೇಕು.

ಇಂದು ನಾವು ನೋಡುತ್ತಿರುವ ಭಯೋತ್ಪಾದನೆ ಕೃತ್ಯಗಳಿಗೆ ರಾಕ್ಷಸೀ ಮನೋಭಾವವೇ ಕಾರಣ. ಒಬ್ಬ ವ್ಯಕ್ತಿ ಅಮೆರಿಕದ ಅಹಂಕಾರವನ್ನು 9/11 ಕೃತ್ಯದ ಮೂಲಕ ಬಗ್ಗುಬಡಿಯಲು ಸಾಧ್ಯವಾಯಿತು. ಇಂತಹ ದುರ್ಜನರು ಆಧುನಿಕ ತಂತ್ರಜ್ಞಾನವನ್ನೂ ಬಳಸಿಕೊಳ್ಳುತ್ತಿದ್ದಾರೆ. ಜಗತ್ತಿನಲ್ಲಿರುವ ಒಳ್ಳೆಯವರ ಕೆಲಸ ಯಾವಾಗಲೂ ನಿಧಾನ. ಇವರು ದುರ್ಜನರ ವೇಗವನ್ನು ಮೀರಿಸಿ ಕೆಲಸ ಮಾಡಬೇಕು. ಆಗ ದೈವೀಗುಣವೇ ಮೇಲೆದ್ದು ಕಾಣಿಸುತ್ತದೆ. ರಾಕ್ಷಸೀ ಗುಣ ಮತ್ತು ದೈವೀ ಮನೋಭಾವಗಳ ನಡುವೆ ಸಂಘರ್ಷ ಯಾವಾಗಲೂ ಇರುವಂಥದ್ದು. ಕಾಮ, ಕ್ರೋಧ, ಮೋಹ, ಲೋಭ, ಮದಮಾತ್ಸರ್ಯಗಳು ರಾಕ್ಷಸೀ ಭಾವಗಳು. ಪ್ರೀತಿ, ದಾನ, ದಯೆ, ಸ್ವಾರ್ಥರಾಹಿತ್ಯ, ಶಾಂತಿ, ಒಟ್ಟಾಗಿ ಕೆಲಸ ಮಾಡುವ ಪ್ರವೃತ್ತಿ ಮುಂತಾದ ಸಾತ್ವಿಕ ಗುಣಗಳು ದೈವೀಸ್ವಭಾವಗಳು. ಇವುಗಳನ್ನು ಮತ್ತೆ ಮುನ್ನೆಲೆಗೆ ತರಬೇಕು. ಮಹಿಳೆಯರು ತಮ್ಮಲ್ಲಿ ಸಹಜವಾಗಿರುವ ಪ್ರಖರ ವಾತ್ಸಲ್ಯಭಾವವನ್ನು ಅಭಿವ್ಯಕ್ತಿಸಬೇಕು.

ಭಾರತದ ಪ್ರಧಾನ ಮಂತ್ರಿಗಳು, ಕೆಲವು ವರ್ಷಗಳ ಹಿಂದೆ ಅಡುಗೆ ಅನಿಲದ ಮೇಲಿನ ಸಬ್ಸಿಡಿಯನ್ನು ಬಿಟ್ಟುಬಿಡಿ, ಅದರಿಂದ ದೇಶದ ಬಡಜನತೆಗೆ ಅಡುಗೆ ಅನಿಲವನ್ನು ಉಚಿತವಾಗಿ ನೀಡಬಹುದು ಎಂದು ಕರೆ ನೀಡಿದಾಗ ಕೋಟ್ಯಂತರ ಜನರು ಸ್ಪಂದಿಸಿದರು. ಇಂತಹ ವಾತ್ಸಲ್ಯಭಾವ ಮತ್ತು ತ್ಯಾಗ ಗುಣ ಭಾರತೀಯರಲ್ಲಿ ಮೊದಲಿನಿಂದಲೂ ಇದ್ದಿತ್ತು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಇದೇ ಭಾವವನ್ನು ಉದ್ದೀಪಿಸಿ "ಸತ್ಯಾಗ್ರಹ" ಎಂಬ ವಿನೂತನ ಪ್ರತಿಭಟನಾ ವಿಧಾನವನ್ನು ಬಾಪೂಜಿ ನಿರೂಪಿಸಿದರು. ಅಹಿಂಸೆ, ಸತ್ಯ, ತಪಸ್ಸುಗಳ ಆಧಾರದ ಮೇಲೆ ಸತ್ಯಕ್ಕಾಗಿ ಒತ್ತಾಯಿಸುವ ಈ ಹೋರಾಟದಲ್ಲಿ ಭಾಗವಹಿಸುವಂತೆ ಗಾಂಧೀಜಿ ನೀಡಿದ ಕರೆಗೆ ಕೋಟ್ಯಂತರ ಯುವಕರು ಓಗೊಟ್ಟರು. ಇದು ನಮ್ಮ ದೇಶದ ವಿಶೇಷತೆ. ಭಾರತವು ಮತ್ತೆ ಮೇಲೆದ್ದು ಬರಬೇಕಾದರೆ ಆದರ್ಶ ವ್ಯಕ್ತಿಗಳು ದೇಶವನ್ನು ಮುನ್ನಡೆಸಬೇಕು. ನರೇಂದ್ರ ಮೋದಿಯವರಲ್ಲಿ ಇಂತಹ ಆದರ್ಶ ವ್ಯಕ್ತಿಯನ್ನು ಕಾಣುತ್ತೇವೆ. ಅವರ ಇಡೀ ಜೀವನ, ರಾಷ್ಟ್ರಕ್ಕಾಗಿ ಸಮರ್ಪಿತ ಜೀವನ.

ಅವರ ಬಲಗೈಯಾಗಿ ಕೆಲಸ ಮಾಡಿದವರು ಅನಂತಕುಮಾರರು. ಅವರಲ್ಲಿರುವ ಅದಮ್ಯ ಚೇತನ ಮತ್ತು ದೈತ್ಯದಮನ ಶಕ್ತಿಗಳ ಮೂಲಕ ಅವರು ಉತ್ತಮ ಸ್ಥಾನಮಾನವನ್ನು ಪಡೆದುಕೊಂಡರು. ಅವರ ಆದರ್ಶಗಳನ್ನು ಸಹೋದರಿ ತೇಜಸ್ವಿನಿಯವರು ಅದಮ್ಯಚೇತನ ಸಂಸ್ಥೆ ಮತ್ತು ಅನಂತಕುಮಾರ್ ಪ್ರತಿಷ್ಠಾನದ ಮೂಲಕ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ತೇಜಸ್ವಿನಿಯವರು ಚುನಾಯಿತ ಸೋದರಿಯರಿಗೆ ಆದರ್ಶಪ್ರಾಯರಾಗಿದ್ದಾರೆ.

ನೇತೃತ್ವ ವಿಕಸನ ಶಿಬಿರಗಳಲ್ಲಿ ಪಡೆದ ಜ್ಞಾನವನ್ನು ಗ್ರಾಮಸಮಾಜಗಳ ಪರಿವರ್ತನೆಗೆ ಬಳಸಿಕೊಳ್ಳಬೇಕು. ಚುನಾಯಿತ ಮಹಿಳೆಯರು ವಾತ್ಸಲ್ಯಭಾವದ ಅಭಿವ್ಯಕ್ತ ರೂಪವಾಗಬೇಕು. ಪ್ರತಿದಿನ ಏನಾದರೂ ಕೊಡುವ ತ್ಯಾಗ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಸೇವೆಯೂ ಒಂದು ದಾನವೇ. ವೃದ್ಧರ ಸೇವೆ, ಪಾರ್ಥನಿಯಂ ಕೀಳುವುದು ಮುಂತಾದವುಗಳಲ್ಲಿ ಕೂಡ ನಿರತರಾಗಬಹುದು. ಇದರಿಂದ ನಮ್ಮಲ್ಲಿ ಸಾತ್ವಿಕವಾದ ದೈವೀಭಾವ ಜಾಗೃತವಾಗುತ್ತದೆ. ಭಕ್ತಿಭಾವವು ನಮ್ಮನ್ನು ಆದರ್ಶ ವ್ಯಕ್ತಿತ್ವದ ಕಡೆ ಮುನ್ನಡೆಸುತ್ತದೆ. ನಮ್ಮಲ್ಲಿ ಅಭಿಮಾನ, ಅಹಂಕಾರಗಳು ಕಡಿಮೆಯಾಗಿ ಪ್ರಪತ್ತಿ ಅಂದರೆ ಶರಣಾಗತಿ ಹುಟ್ಟಿಕೊಳ್ಳಬೇಕು. ನಾವು ಹೃದಯ ವೈಶಾಲ್ಯವನ್ನು ಬೆಳೆಸಿಕೊಳ್ಳಬೇಕು.

ನಮ್ಮ ರಾಜ್ಯ, ನಮ್ಮ ದೇಶ ಉನ್ನತವಾಗಬೇಕಾದರೆ ಭಕ್ತಿಭಾವದಲ್ಲಿ ನಮ್ಮ ಇಷ್ಟದೇವರನ್ನು ಮನಸ್ಸಿನಲ್ಲಿ ಸ್ಥಾಪಿಸಿಕೊಂಡು ಕೆಲಸಮಾಡಬೇಕು. ಅನಂತಕುಮಾರರಿಗೆ ಭಾರತಮಾತೆಯೇ ಇಷ್ಟದೇವತೆ. ಅರುಣಾಚಲ ಪ್ರದೇಶದ ನಮ್ಮ ಅನೇಕ ಶಾಲೆಗಳ ಮಕ್ಕಳಿಗೆ ಭಾರತಮಾತೆಯೇ ಇಷ್ಟದೈವ. ನಮ್ಮ ಇಷ್ಟದೈವದ ಹೆಸರನ್ನು ಪುನಶ್ಚರಣೆ ಮಾಡುತ್ತಿರಬೇಕು. ಇಷ್ಟದೈವದ ಕುರಿತು ಸದಾ ಚಿಂತನೆ, ಜಪ ಮಾಡುತ್ತಿರಬೇಕು. ನಮ್ಮ ಗ್ರಾಮ, ನಮ್ಮ ರಾಜ್ಯ, ನಮ್ಮ ದೇಶಗಳನ್ನು ದೈವವೆಂದು ಭಾವಿಸಿ ಆರಾಧಿಸುವುದರಿಂದ ನಮ್ಮ ಸಣ್ಣತನ ದೂರವಾಗುತ್ತದೆ. ಇದಕ್ಕೆ ಸಮಾಜದಲ್ಲಿ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ. ಕೊಡುವ ಸ್ವಭಾವವನ್ನು ನಮ್ಮ ಮಕ್ಕಳಿಂದಲೇ ಪ್ರಾರಂಭಿಸಬೇಕು. ಧನಸಂಗ್ರಹ ಪ್ರವೃತ್ತಿಯನ್ನು ತ್ಯಜಿಸಿ ನಿಸ್ವಾರ್ಥತೆ, ಸತ್ಯಸಂಧತೆಗಳನ್ನು ಅವರಲ್ಲಿ ಬೆಳೆಸಬೇಕು.
ನಮಗೆ ದೊರೆತಿರುವ ಅಧಿಕಾರ, ಜವಾಬ್ದಾರಿಗಳನ್ನು ಪ್ರಜಾಪ್ರಭುತ್ವದ ಆಧಾರದಲ್ಲಿ ಬಳಸಿಕೊಂಡು ಭಕ್ತಿಯೋಗದ ಮೂಲಕ ಭಾರತಮಾತೆಯನ್ನು ಉನ್ನತೋನ್ನತ ಸ್ಥಿತಿಗೆ ತಲುಪಿಸಬಹುದು. ವಾತ್ಸಲ್ಯಭಾವವು ಜೀವನದ ಲಕ್ಷ್ಯವಾಗಲಿ, ಉತ್ತಮ ಭಾರತದ ನಿರ್ಮಾಣಕ್ಕಾಗಿ ನಾವೆಲ್ಲರೂ ಶ್ರಮಪಡೋಣ.

(ಅನಂತಕುಮಾರ್ ಪ್ರತಿಷ್ಠಾನವು ಪಂಚಾಯತಿ ಸದಸ್ಯೆಯರಿಗಾಗಿ ಆಯೋಜಿಸಿದ್ದ ಗ್ರಾಮ ಚೇತನ-ನೇತೃತ್ವ ವಿಕಸನ ಶಿಬಿರದ ಉದ್ಘಾಟನಾ ಭಾಷಣದ ಸಂಗ್ರಹ)

## ಗ್ರಾಮ ಚೇತನ ಶಿಬಿರಾರ್ಥಿಗಳ ಕೆಲವು ಅನಿಸಿಕೆಗಳು



ಇದೊಂದು ಅಪೂರ್ವ ತರಬೇತಿ. ಅದಮ್ಯ ಚೇತನ ಸಂಸ್ಥೆ ಮತ್ತು ಅನಂತಕುಮಾರ್ ಪ್ರತಿಷ್ಠಾನದ ಬಗ್ಗೆ ಮಾತನಾಡಲು ಪದಗಳು ಸಾಕಾಗುವುದಿಲ್ಲ. ಅದಮ್ಯ ಚೇತನದ ಅಡುಗೆ ಮನೆ, ಅಲ್ಲಿನ ಸ್ವಚ್ಛತೆ ಮತ್ತು ಯಾವುದೇ ನಿರೀಕ್ಷೆಗಳನ್ನಿರಿಸಿಕೊಳ್ಳದೆ ಸಮಾಜಸೇವೆಯಲ್ಲಿ ನಿರತರಾಗಿರುವ ಸ್ವಯಂಸೇವಕರ ತಂಡ ನಮ್ಮ ಗಮನ ಸೆಳೆಯಿತು. ತೇಜಸ್ವಿನಿ ಅನಂತಕುಮಾರರ ಸರಳತೆ, ಸೌಮ್ಯಸ್ವಭಾವ, ಪ್ರೀತಿ ವಿಶ್ವಾಸಗಳನ್ನು ನಾವು ಎಂದಿಗೂ ಮರೆಯುವಂತಿಲ್ಲ. ಅವರ ತಂಡವು ನಮ್ಮ ಸಂಪೂರ್ಣ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಂಡಿದೆ. ಇದು ನಮ್ಮ ನಿರೀಕ್ಷೆಯನ್ನು ಮೀರಿದ ತರಬೇತಿ ಕಾರ್ಯಕ್ರಮವಾಗಿತ್ತು.
ಇಲ್ಲಿ ನಮ್ಮ ಗಮನಕ್ಕೆ ಬರುವಂತೆ, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು, ಕಸದಿಂದ ರಸ, ಹಸಿರು- ಉಸಿರು ಪರಿಕಲ್ಪನೆಗಳನ್ನು ನಮ್ಮ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಜಾರಿ ಮಾಡಲು ಪ್ರಯತ್ನಿಸುತ್ತೇನೆ. ಗ್ರಾಮ ಪಂಚಾಯತಿಯ ನೈರ್ಮಲ್ಯ, ಕಲ್ಯಾಣಿಯ ಪುನಶ್ಚೇತನಗಳಿಗೆ ಆದ್ಯತೆ ಕೊಡಲು ಬಯಸುತ್ತೇನೆ.

**ಶ್ರೀಮತಿ ಜಯಮ್ಮ**, ಆರೂಢಿ ಗ್ರಾಮ ಪಂಚಾಯತಿ ಅಧ್ಯಕ್ಷೆ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ ತಾಲೂಕು.



ಜನರಿಗೆ ಉಪಯುಕ್ತವಾದ ಯಾವುದಾದರೂ ವಿಶೇಷವಾದ ಕಾರ್ಯಕ್ರಮ ಮಾಡಬೇಕೆಂಬ ಉತ್ಸಾಹ ಬಂದಿದೆ. ಮಹಿಳೆಯರು ಯಾವ ಕೆಲಸವನ್ನು ಬೇಕಾದರೂ ಮಾಡಬಹುದು. ಮಹಿಳೆಯರು ಮನೆಯಲ್ಲಿಯೇ ಕುಳಿತು ಮಾಡಬಹುದಾದ ಯಾವುದಾದರೂ ಯೋಜನೆಯನ್ನು ಪ್ರಾರಂಭಿಸಬೇಕೆಂದು ಯೋಚಿಸಿದ್ದೇನೆ. ನಮ್ಮ ಕ್ಷೇತ್ರದ ಎಲ್ಲರನ್ನೂ ಒಟ್ಟಿಗೆ ಸೇರಿಸಿ, ಒಗ್ಗಟ್ಟಿನಿಂದ ಕೆಲಸ ಮಾಡುವ ಪ್ರಯೋಜನಗಳನ್ನು ತಿಳಿಸಿಕೊಡಬೇಕೆಂದು ನಿರ್ಧರಿಸಿದ್ದೇನೆ.

**ಶ್ರೀಮತಿ ಸಹನಾ**, ಸದಸ್ಯೆ, ಗುಂಡಂಗೆರೆ, ಹೊಸಹಳ್ಳಿ ಗ್ರಾಮ ಪಂಚಾಯತಿ



ಡಾ. ತೇಜಸ್ವಿನಿ ಮೇಡಂ ಅವರ ವ್ಯಕ್ತಿತ್ವದಿಂದಲೇ ನಾವು ಅನೇಕ ವಿಷಯಗಳನ್ನು ಕಲಿತಿದ್ದೇವೆ. ಪ್ರೀತಿ, ಸಹನೆ, ತಾಳ್ಮೆ ಯಶಸ್ಸಿಗೆ ಅತಿ ಅಗತ್ಯ ಎಂಬುದನ್ನು ಅವರನ್ನು ನೋಡಿಯೇ ಕಲಿತುಕೊಂಡೆ. ಮಹಿಳೆಯರಿಗೆ ತಲುಪಬೇಕಾಗಿರುವ ಅನೇಕ ವಿಷಯಗಳನ್ನು ನಾವು ತಿಳಿದುಕೊಂಡೆವು. ಅವುಗಳನ್ನು ನಮ್ಮ ಭಾಗದ ಮಹಿಳೆಯರಿಗೆ ತಿಳಿಸುತ್ತೇವೆ.

**ಶ್ರೀಮತಿ ಬಿ ಉಮಾ**, ಸದಸ್ಯೆ, ಶಿವಗಂಗೆ ಗ್ರಾಮ ಪಂಚಾಯತಿ, ನೆಲಮಂಗಲ ತಾಲೂಕು.



ನಮ್ಮ ಊರಿನಲ್ಲಿ ಕಸದ ಸಮಸ್ಯೆ ಜಾಸ್ತಿ. ಸಭೆಗಳಲ್ಲಿ ನೀರು ಕುಡಿಯಲು ನಾವು ಪ್ಲಾಸ್ಟಿಕ್ ಬಾಟಲಿ ಬಳಸುತ್ತೇವೆ. ಊಟಕ್ಕೆ ಅಡಿಕೆ ಹಾಳೆಯ ತಟ್ಟೆ ಬಳಸುತ್ತೇವೆ. ಅದರ ಬದಲು ನಾವು ಈಗಲೇ ಸ್ಟೀಲ್ ಲೋಟ ಮತ್ತು ತಟ್ಟೆಗಳನ್ನು ಖರೀದಿಸಿ ಇಟ್ಟುಕೊಳ್ಳಬೇಕು. ಇದರಿಂದ ಕನಿಷ್ಠ ಮುಂದಿನ ಐವತ್ತು ವರ್ಷಗಳ ವರೆಗೆ ಪಂಚಾಯತಿ ಕಛೇರಿಯಿಂದ ಕಸ ಉತ್ಪತ್ತಿಯಾಗುವುದನ್ನು ತಡೆದು ಊರಿಗೆ ಮಾದರಿಯಾಗಬಹುದು. ಅಧ್ಯಕ್ಷರು ಮತ್ತು ಪಿಡಿಓಗಳ ಜೊತೆ ಮಾತನಾಡಿ ಹಸಿಕಸ ಮತ್ತು ಒಣಕಸಗಳನ್ನು ವಿಂಗಡಿಸಲು ಪ್ರತ್ಯೇಕ ತೊಟ್ಟಿಗಳನ್ನು ವ್ಯವಸ್ಥೆ ಮಾಡಲು ಒತ್ತಾಯಿಸುತ್ತೇವೆ. ಈ ತರಬೇತಿಗೆ ಮೊದಲು ನನಗೆ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದ ಅಭ್ಯಾಸವಿರಲಿಲ್ಲ. ಇಲ್ಲಿ ಎರಡೆರಡು ಬಾರಿ ಎಲ್ಲರ ಎದುರು ಮಾತನಾಡುವ ಅವಕಾಶ ದೊರೆತು ಆತ್ಮವಿಶ್ವಾಸ ಬಂದಿದೆ. ನಮ್ಮಲ್ಲಿ ಅನೇಕ ಮಹಿಳೆಯರು ಹೊಲಿಗೆ ಕಲಿತಿದ್ದಾರೆ. ಕೆಲವರ ಹತ್ತಿರ ಹೊಲಿಗೆ ಯಂತ್ರಗಳೂ ಇವೆ. ಅವರನ್ನೆಲ್ಲ ಒಂದೆಡೆ ಸೇರಿಸಿ ಪರಿಸರ ಸ್ನೇಹಿ ಚೀಲಗಳನ್ನು ತಯಾರಿಸುವ ಉದ್ದೇಶ ಹೊಂದಿದ್ದೇನೆ. ಇಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಬಂದಿರುವ ಶ್ರೀಮತಿ ಜಾಯ್ಸ್ ಪ್ರಕಾಶ್ ಕೂಡ ತರಬೇತಿ ನೀಡಲು ಒಪ್ಪಿಕೊಂಡಿದ್ದಾರೆ.

**ಶ್ರೀಮತಿ ಅನ್ನಪೂರ್ಣ**, ಸದಸ್ಯೆ, ಕೊಡಿಗೇಹಳ್ಳಿ ಗ್ರಾಮಪಂಚಾಯತಿ, ದೊಡ್ಡಬಳ್ಳಾಪುರ ಗ್ರಾಮ.



ಈ ಶಿಬಿರದಲ್ಲಿ ನಾವು ಮಹಿಳೆಯರ ಹಕ್ಕು, ಶಿಕ್ಷಣ, ಕೃಷಿ, ಪರಿಸರ, ಪಂಚಾಯತಿ ಅಭಿವೃದ್ಧಿ, ಸ್ವಚ್ಛತೆ, ಸ್ಥಳೀಯ ಸಂಸ್ಥೆಗಳು ಮುಂತಾದ ಅನೇಕ ವಿಷಯಗಳ ಬಗ್ಗೆ ತಿಳಿದುಕೊಂಡೆವು. ಶಿಬಿರಕ್ಕೆ ಮೊದಲು ಅದಮ್ಯ ಚೇತನದ ಅಡುಗೆ ಮನೆಗೆ ನೀಡಿದ ಭೇಟಿ ಅವಿಸ್ಮರಣೀಯ. ತರಬೇತಿಯ ಕಾಲದಲ್ಲಿ ಊಟ ವಸತಿ ತುಂಬ ಚೆನ್ನಾಗಿತ್ತು. ಇಲ್ಲಿ ಕಲಿತ ಯೋಗವೂ ಉಪಯುಕ್ತವಾಗಿತ್ತು. ಇಲ್ಲಿ ಬಂದ ಮೇಲೆ ಹೆಣ್ಣು ಮಕ್ಕಳು ಯಾವುದರಲ್ಲಿಯೂ ಕಡಿಮೆಯಿಲ್ಲ ಎಂಬ ಹೆಮ್ಮೆ ಮೂಡಿದೆ.

**ಶ್ರೀಮತಿ ಗಂಗರಾಜಮ್ಮ**, ಸದಸ್ಯೆ, ಆರೂಢಿ ಗ್ರಾಮಪಂಚಾಯತಿ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ ತಾಲೂಕು,

ಸಸ್ಯಲೋಕ ಪರಿಚಯ ಮಾಲಿಕೆ- 4

# ಬಹೂಪಯೋಗೀ ಬೋರೆಹಣ್ಣು



**ಬೋ**ರೆಹಣ್ಣಿನ ಮರ ರ್ಯಾಮ್ನೇಸೀ ಕುಟುಂಬಕ್ಕೆ ಸೇರಿದ ಬಹುವಾರ್ಷಿಕ ವೃಕ್ಷ ವಾಗಿದೆ. ಇಂಗ್ಲೀಷ್ ಭಾಷೆಯಲ್ಲಿ ಇದಕ್ಕೆ ಬ್ಬೇರ್ ಫ್ರೂಟ್ ಟ್ರೀ ಎಂದು ಕರೆಯುತ್ತಾರೆ. ಇದರ ವೈಜ್ಞಾನಿಕ ಹೆಸರು - ಝಿಝಿಫಸ್ ಜುಜೂಬ.100 ವರ್ಷಗಳಿಗೂ ಹೆಚ್ಚಿನ ಕಾಲ ಬದುಕಬಲ್ಲ ಈ ಮರದ ಮೂಲ ಭಾರತ ದೇಶ. ಇದು ಹುಲ್ಲುಗಾವಲು, ಒಣಬಂಜರು ನೆಲಗಳಲ್ಲಿ ಕೂಡಾ ಚೆನ್ನಾಗಿ ಬೆಳೆಯುತ್ತದೆ. ಬೋರೆಗೆ ಸಂಸ್ಕೃತದಲ್ಲಿ ಬದರಿಫಲಂ ಎನ್ನುತ್ತಾರೆ. ರಾಮನಿಗಾಗಿ ಜೀವನವಿಡೀ ಕಾಯುತ್ತಿದ್ದ ವೃದ್ಧ ಭಕ್ತೆ ಶಬರಿ ರಾಮನನ್ನು ಕಂಡಾಗ ಮೊದಲು ನೀಡಿದ ಹಣ್ಣು ಬೋರೆ ಹಣ್ಣು...

## ಮರದ ಲಕ್ಷಣಗಳು

ಬೋರೆ ಹಣ್ಣಿನ ಮರ 10-15 ಮೀ. ಎತ್ತರಕ್ಕೆ ಬೆಳೆಯುವ ಕುಳ್ಳು ಕಾಂಡದ ಮಧ್ಯಮ ಪ್ರಮಾಣದ ವೃಕ್ಷ. ಕಾಂಡ ಕಪ್ಪುಬಣ್ಣದ ತೊಗಟೆಯಿಂದ ಆವೃತ ವಾಗಿದೆ. ತೊಗಟೆಯ ಮೇಲ್ಗಡೆ ಸೀಳಿಕೆಗಳಿದ್ದು ಒಳಭಾಗ ಕೆಂಪಾಗಿರುತ್ತದೆ. ರೆಂಬೆಗಳು ತೂಗು ಬಿದ್ದಿರುತ್ತವೆ. ಪುಷ್ಪ ಪತ್ರಗಳು (ಸ್ಟಿಪ್ಯುಲ್ಸ್) ಮುಳ್ಳುಗಳಾಗಿ ಮಾರ್ಪಟ್ಟು ಒಂದು ನೆಟ್ಟಗೂ ಇನ್ನೊಂದು ಇಳಿಮುಖವಾಗಿಯೂ ಇವೆ. ಸುಮಾರು ಚಕ್ರಾಕಾರವಾಗಿ ಮೂರು ನರಗಳುಳ್ಳ ಎಲೆಗಳ ಕೆಳಭಾಗದಲ್ಲಿ ಬಿಳಿಗೂದಲುಗಳಿವೆ. ಹೂಗಳು ಸಣ್ಣವಾಗಿ ಹಸಿರು. ಹಳದಿ ಬಣ್ಣದಿಂದ ಕೂಡಿದ್ದು ಎಲೆ ನಡುವೆ ಗೊಂಚಲುಗಳಲ್ಲಿ (ಸೈಮ್ಸ್) ಕಾಣಬರುತ್ತವೆ. ಹಣ್ಣುಗಳು ದುಂಡಾಗಿ ಕಿತ್ತಳೆ ಅಥವಾ ಕೆಂಪು ಬಣ್ಣದಿಂದ ಕೂಡಿರುತ್ತವೆ. ಒಳ ಓಟೆ ಬಹುಗಟ್ಟಿ.
ರಾಯ ಬೋರೆ ಎಂಬ ಒಂದು ಜಾತಿಯ ಮರ ತಿನ್ನಲು ಯೋಗ್ಯವಾದ ಹಣ್ಣುಗಳನ್ನು ಕೊಡುತ್ತದೆ. ಸಣ್ಣ ಹೊಳೆಯುವ ಎಲೆಗಳು.ಇದು ಬಹಳ ಎತ್ತರ 4 ಮೀಟರ್ ಕವಲಿನ ಕಾಂಡ ಹೊಂದಿರುವ ಮರವಾಗಿದೆ. ಮೇ ನಿಂದ ಆಗಸ್ಟ್ ವರೆಗೆ ಸಣ್ಣ ಹಸಿರು ಮಿಶ್ರಿತ ಬಿಳಿ ಹೂವುಗಳು ಬಿಡುತ್ತವೆ. ಹಣ್ಣಿನಲ್ಲಿ ಸಾಮಾನ್ಯವಾಗಿ ಒಂದು ಬೀಜ ಇರುತ್ತದೆ. ಕೆಂಗಂದು ಬಣ್ಣದ ಹಣ್ಣು ಅಂಡಾಕಾರ ಹೊಂದಿರುತ್ತದೆ.

## ಬೋರೆಯ ಕೃಷಿ

ಬಾರಿ ಹಣ್ಣನ್ನು ರೈತಮಿತ್ರನೆಂದೇ ಹೇಳಬಹುದು. ಅತ್ಯಂತ ಕಡಿಮೆ ನೀರಿನಿಂದ ಕೂಡ ಸಮೃದ್ಧವಾಗಿ ಬೆಳೆದು ಹಣ್ಣು ಕೊಡುವ ಈ ಗಿಡ ಬಹಳ ವಿಶಿಷ್ಟವಾದುದು.
ರೈತರು ಸಾಂಸ್ಕೃತಿಕ ಬೆಳೆಗಳ ಕೃಷಿಯಿಂದ ನಷ್ಟ ಅನುಭವಿಸುತ್ತಿರುವಾಗ 'ಶೂನ್ಯ ಬಂಡವಾಳ ಅಧಿಕ ಲಾಭ'ದ ಸಾವಯವ ಕೃಷಿ ಪದ್ಧತಿಯಿಂದ ಪಡೆದ ಲಾಭ ಅನೇಕ ಜನರ ಕಣ್ಣು ತೆರೆಸಿದೆ.
ಪ್ರಸ್ತುತ ಹೈಬ್ರಿಡ್ ತಳಿಯ 'ಸೇಬು ಬೋರೆ' ಎನ್ನುವ ತಳಿಯನ್ನು ತೆಂಗಿನ ಅಂತರ್ ಬೆಳೆಯಾಗಿ ಬೆಳೆಸುವ ಕ್ರಮ ಬಯಲುಸೀಮೆಗೆ ವರವಾಗಿ ಬಂದಿದೆ. ಗಿಡದಿಂದ ಗಿಡಕ್ಕೆ 8 ಅಡಿ, ಸಾಲಿನಿಂದ ಸಾಲಿಗೆ 14 ಅಡಿ ಅಂತರದಲ್ಲಿ ಬೆಳೆಸಿದ್ದಾರೆ. ಆಪಲ್ ಬೋರೆ ಹಣ್ಣಿನ ಬೆಲೆ ಕ್ವಿಂಟಾಲಿಗೆ 2,500ರೂ.ಗಳು.

ಬಿಜಾಪುರ ಬಾಗಲಕೋಟೆ,ಹಾವೇರಿ ರಾಣೇಬೆನ್ನೂರು ಮುಂತಾದ ಬಯಲು ಸೀಮೆಯ ಜನರಿಗೆ ಪ್ರಿಯವಾಗಿರುವ. ಹಾಗೂ ಅಲ್ಲಿ ಹೆಚ್ಚಾಗಿ ಬೆಳೆಯುವ ಬಡವನ ಸೇಬು ಎಂದೇ ಖ್ಯಾತಿ ಪಡೆದಿರುವ ಬೋರೆಹಣ್ಣಿನಲ್ಲಿ ಅಪಾರ ಆರೋಗ್ಯ ಅಡಗಿದೆ.





## ಆರೋಗ್ಯದ ದೃಷ್ಟಿಯಿಂದ ಬೋರೆ ಹಣ್ಣು

ಬೋರೆ ಹಣ್ಣುಗಳಲ್ಲಿ ಎ, ಬಿ ಮತ್ತು ಸಿ ಜೀವಸತ್ವ ಹೊಂದಿದ್ದು, ಕ್ಯಾಲ್ಸಿಯಂ, ರಂಜಕ, ಕಬ್ಬಿಣ, ಮೇಗ್ನೇಶಿಯಂ, ಸತು ಹೇರಳವಾಗಿದೆ. ನೀರಿನಂಶ, ನಾರಿನಾಂಶ ಇರುವುದರಿಂದ ದೇಹಕ್ಕೆ ಶಕ್ತಿ ಒದಗಿಸುತ್ತದೆ. ವರ್ಷದುದ್ದಕ್ಕೂ ಲಭಿಸುವ ಹಣ್ಣುಗಳ ಜತೆಗೆ ಹವಾಮಾನಕ್ಕೆ ಅನುಗುಣವಾಗಿ ಕೆಲವೇ ಕೆಲವು ದಿನಗಳ ಕಾಲ ಮಾತ್ರವೇ ದೊರೆಯುವ ಬೋರೆ ಹಣ್ಣಿನ ರುಚಿಯನ್ನು ತಪ್ಪದೇ ಸವಿಯಬೇಕು. ಇದರಿಂದ ಬಾಯಿ ರುಚಿ ಮಾತ್ರವಲ್ಲದೇ ಆರೋಗ್ಯದ ದೃಷ್ಟಿಯಿಂದ ಉತ್ತಮ ಎನ್ನುವುದು ವೈಜ್ಞಾನಿಕವಾಗಿ ಸಾಬೀತಾಗಿದೆ.

## ಔಷಧೀಯ ಉಪಯೋಗಗಳ ಹಣ್ಣು

ವಾಂತಿಯಾಗುತ್ತಿದ್ದಲ್ಲಿ ಬೋರೆ ಹಣ್ಣು ಮತ್ತು ಕಾಳು ಮೆಣಸು ಸೇರಿಸಿ ಕಷಾಯ ತಯಾರಿಸಿ ಅದಕ್ಕೆಕಲ್ಲು ಸಕ್ಕರೆ ಬೆರೆಸಿ ಕುಡಿಯಬೇಕು. ನರಗಳ ದೌರ್ಬಲ್ಯವಿರುವವರಿಗೆ ಈ ಹಣ್ಣು ಉತ್ತಮವಾದದ್ದು. ಹೃದ್ರೋಗದಿಂದ ಬಳಲುವವರಿಗೆ ಬೋರೆಹಣ್ಣು ಉತ್ತಮ ಟಾನಿಕ್ ಆಗಿದೆ. ಮಲಬದ್ಧತೆ ಇರುವವರು , ಜೀರ್ಣ ಶಕ್ತಿ ಹೆಚ್ಚಿಸಲು ಈ ಹಣ್ಣನ್ನು ತಿನ್ನಬೇಕು. ಜ್ವರವಿರುವಾಗ ಬೋರೆ ಹಣ್ಣಿನ ಬೇರಿನ ಪುಡಿಯನ್ನು ಜೇನುತುಪ್ಪ ಅಥವಾ ಹಾಲಿನೊಂದಿಗೆ ಬೆರೆಸಿ ಕುಡಿಯಬೇಕು. ಈ ಹಣ್ಣುಗಳ ಸೇವನೆ ರಕ್ತ ಶುದ್ಧಿಗೆ ಸಹಕಾರಿ.


ಬೋರೆ ಹಣ್ಣಿನ ಎಲೆಗಳಲ್ಲಿಯೂ ಅಡಗಿದೆ ಅಗಾಧವಾದ ಔಷಧೀಯ ಗುಣ. ಪ್ರತಿದಿನ ರಾತ್ರಿ ಮಲಗುವ ಮುನ್ನ ಎರಡರಿಂದ ಮೂರು ಬೋರೆ ಹಣ್ಣಿನ ಎಲೆಯನ್ನು ಸೇವಿಸಿ ಮಲಗುವುದರಿಂದ ಸುಖಕರವಾದ ನಿದ್ರೆಯನ್ನು ಮಾಡಬಹುದು. ಎಲೆಗಳ ಸೇವನೆ ಹೃದಯದ ಆರೋಗ್ಯವನ್ನು ವೃದ್ಧಿ ಮಾಡುತ್ತದೆ. ಅಲ್ಲದೆ, ಅಸಿಡಿಟಿ ಸಮಸ್ಯೆಗೂ ಬ್ಲಡ್ ಪ್ರೆಶರ್ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ.
ತೂಕ ಇಳಿಸಿಕೊಳ್ಳಲು ಮತ್ತು ಅನಗತ್ಯ ಬೊಜ್ಜನ್ನು ಕರಗಿಸಲು ಬೋರೆ ಹಣ್ಣಿನ ಎಲೆ ಒಂದು ಉತ್ತಮವಾದ ಔಷಧಿ ಅಂದರೆ ತಪ್ಪಾಗಲಾರದು.



- ಛಾಯಾ ಓಕ್ ಬಾಪಟ್

ವ್ಯಕ್ತಿ ವಿಶೇಷ ಮಾಲಿಕೆ

# ಪಂಡಿತ ಮದನ ಮೋಹನ ಮಾಲವೀಯ



ಮದನ ಮೋಹನ ಮಾಲವೀಯರು ಜನಿಸಿದ್ದು ಡಿಸೆಂಬರ್ 25, 1861 ರಂದು. ಉತ್ತರ ಪ್ರದೇಶದ ಪ್ರಯಾಗರಾಜ್(ಅಂದಿನ ಅಲಹಾಬಾದ್)ನಲ್ಲಿ. ತಂದೆ ಪಂಡಿತ ವ್ರಜನಾಥ ಮತ್ತು ತಾಯಿ ಮೂನಾ ದೇವಿ. ಪ್ರಾಥಮಿಕ ಶಿಕ್ಷಣ, ಪಂಡಿತ ಹರದೇವರ ಗುರುಕುಲದಲ್ಲಿ. ಮಗನ ಜ್ಞಾನದಾಹವನ್ನು ತಣಿಸಲು ತಾಯಿ ಮೂನಾದೇವಿ ತಮ್ಮ ಚಿನ್ನದ ಬಳೆಗಳನ್ನು ಒತ್ತೆಯಿಟ್ಟು ಆಂಗ್ಲ ಮಾಧ್ಯಮ ಶಾಲೆಗೆ ಸೇರಿಸಿದರು. 1881 ರಲ್ಲಿ ಸೆಂಟ್ರಲ್ ಕಾಲೇಜಿನಿಂದ ಎಫ್ ಎ ಮತ್ತು 1884 ರಲ್ಲಿ ಕಲ್ಕತ್ತಾದಲ್ಲಿ ಬಿ. ಎ. ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. 1885 ರಲ್ಲಿ ಉಪಾಧ್ಯಾಯ ವೃತ್ತಿಯನ್ನು ಕೈಗೊಂಡರು. ಈ ಮಧ್ಯೆ 1878 ರಲ್ಲಿ ಕುಂದನ ದೇವಿಯವರನ್ನು ವಿವಾಹವಾದರು. ಎಲ್. ಎಲ್. ಬಿ ಮಾಡಿಕೊಂಡು ಅಲಹಾಬಾದ್ ಉಚ್ಚನ್ಯಾಯಾಲಯದಲ್ಲಿ ವಕೀಲರಾದರು. ಆದರೆ 1909 ರಲ್ಲಿ ವಕೀಲಿ ವೃತ್ತಿಯಿಂದ ನಿವೃತ್ತಿ ಪಡೆದು ಸಮಾಜಸೇವೆಯಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು.

1886 ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿದ ಮಾಲವೀಯರು ಮುಂದೆ 1909, 1918, 1930 ಮತ್ತು 1932 ರಲ್ಲಿ ಕಾಂಗ್ರೆಸ್ ಅಧಿವೇಶನಗಳ ಅಧ್ಯಕ್ಷರಾಗಿದ್ದರು. ಹಲವಾರು ಸಂಸ್ಥೆಗಳನ್ನು ಕಟ್ಟಿದ್ದರು. ಭಾರತದ ಲಾಂಛನದಲ್ಲಿ ಸೇರಿಕೊಂಡಿರುವ "ಸತ್ಯಮೇವ ಜಯತೇ" ಎಂಬ ಉಪನಿಷದ್ವಾಕ್ಯವನ್ನು ಜನಪ್ರಿಯಗೊಳಿಸಿದರು. ಸ್ವತಃ ರವೀಂದ್ರ ನಾಥ ಟಾಗೋರರೇ ಇವರನ್ನು "ಮಹಾಮನ" ಎಂದು ಕರೆದರು. ಸರ್ವೆಪಲ್ಲಿ ರಾಧಾಕೃಷ್ಣನ್ ಇವರನ್ನು "ಕರ್ಮಯೋಗಿ" ಎಂದು ಕರೆದರು.

## ಶಾಸಕರು ಮತ್ತು ಶಿಕ್ಷಣತಜ್ಞರಾಗಿ

ಬ್ರಿಟಿಷರು ತಮ್ಮ ಒಡೆದಾಳುವ ನೀತಿಗನುಗುಣವಾಗಿ 1905 ರಲ್ಲಿ ವಂಗ ವಿಭಜನೆ ಮಾಡಿದಾಗ ಅದನ್ನು ವಿರೋಧಿಸಿದ್ದರಲ್ಲದೆ ದೇಶದಲ್ಲಿ ಏಕತೆಯನ್ನು ಉಂಟುಮಾಡಲು 1906 ರಲ್ಲಿ "ಹಿಂದೂ ಮಹಾಸಭಾ" ಸ್ಥಾಪನೆ ಮಾಡಿದರು. 1902 ರಲ್ಲಿಯೇ ಪ್ರಾಂತೀಯ ಶಾಸನ ಸಭೆಯ ಸದಸ್ಯರಾಗಿ ಆಯ್ಕೆಯಾದ ಅವರು 1909 ರಿಂದ 1920 ರ ತನಕ ಸತತವಾಗಿ ಶಾಸಕರಾಗಿದ್ದರು. ಸ್ವಲ್ಪ ಕಾಲ ಅಲಹಾಬಾದ್ ಪುರಸಭೆಯ ಉಪಾಧ್ಯಕ್ಷರೂ ಆಗಿದ್ದರು. ಈ ಅವಧಿಯಲ್ಲಿ ಅವರು ತಮಗೆ ಪ್ರಿಯವಾಗಿದ್ದ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಮಸೂದೆ, ರೈಲ್ವೆಯ ರಾಷ್ಟ್ರೀಕರಣ. ಪತ್ರಿಕಾ ಕಾಯಿದೆ, ಗ್ರಾಮಪಂಚಾಯಿತಿ ರಚನೆ ಮುಂತಾದ ವಿವಿಧ ಮಹತ್ತ್ವಪೂರ್ಣ ವಿಷಯಗಳ ಮೇಲೆ ವಿಚಾರಗಳನ್ನು ಮಂಡಿಸಿ ಅಂದಿನ ಸರ್ಕಾರ ಮತ್ತು ಸಾರ್ವಜನಿಕರ ಗಮನ ಸೆಳೆದರು. ನಂತರ ಸರಕಾರವು ರೌಲಟ್ ಕಾಯಿದೆಯನ್ನು ಜಾರಿಗೆ ತಂದಾಗ ಅದನ್ನು ಪ್ರತಿಭಟಿಸಿ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

ಬ್ರಿಟಿಷರು 1833 ರಲ್ಲಿಯೇ ಗುಲಾಮ ಪದ್ಧತಿಯನ್ನು ನಿಷೇಧಿಸಿದ್ದರೂ ಅದನ್ನು "ಒಪ್ಪಂದದ ಕೂಲಿ" ಎಂಬ ಹೊಸ ವೇಷದಲ್ಲಿ ತನ್ನ ವಸಾಹತು ರಾಜ್ಯಗಳಲ್ಲಿ ಚಾಲ್ತಿಯಲ್ಲಿಟ್ಟಿತ್ತು. ಮಾಲವೀಯರು ಈ ಒಪ್ಪಂದದ ಕೂಲಿ ಪದ್ಧತಿಯನ್ನೂ ನಿಷೇಧಿಸುವಂತೆ ವ್ಯಾಪಕವಾದ ಪ್ರಚಾರಾಂದೋಲನವನ್ನು ಕೈಗೊಂಡು ಕೆರಿಬಿಯನ್ ದೇಶಗಳಲ್ಲಿ ಭಾರತೀಯರನ್ನು ಕೂಲಿಯಾಳುಗಳಾಗಿ ಬಳಸಿಕೊಳ್ಳುವ ಪ್ರವೃತ್ತಿಯನ್ನು ತಡೆಯಲೂ ಯಶಸ್ವಿಯಾದರು. ಇದರ ಜೊತೆಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡುವ ಬಗ್ಗೆಯೂ ಪ್ರಚಾರದಲ್ಲಿ ತೊಡಗಿದರು.
ಮಾಲವೀಯರು ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿಯನ್ನು ವಹಿಸಿ, "ಬನಾರಸ್ ಹಿಂದೂ ವಿಶ್ವವಿದ್ಯಾಲಯ" ವನ್ನು 1916 ರಲ್ಲಿ ಸ್ಥಾಪಿಸಿದರು. 1919 ರಿಂದ 1938 ರ ವರೆಗೆ ಅದರ ಉಪಕುಲಪತಿಯಾಗಿ ನಂತರ ತಮ್ಮ ಅಂತಿಮ ದಿನದ ವರೆಗೂ ಅದರ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಿದರು. ಈ ವಿಶ್ವವಿದ್ಯಾಲಯವು ಇಂದಿಗೂ ದೇಶದ ಅಗ್ರಮಾನ್ಯ ಶಿಕ್ಷಣ ಸಂಸ್ಥೆಗಳಲ್ಲೊಂದಾಗಿದೆ. ಏಷ್ಯಾದಲ್ಲಿಯೇ ಅತಿದೊಡ್ಡ ವಸತಿಸಹಿತ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಯನ್ನೂ ಇದು ಪಡೆದುಕೊಂಡಿದೆ.

## ಪತ್ರಕರ್ತರಾಗಿ

ಮಾಲವೀಯರ ಪತ್ರಿಕಾ ವೃತ್ತಿ 1887 ರಲ್ಲಿಯೇ ಪ್ರಾರಂಭವಾಗಿತ್ತು. 1887 ರಲ್ಲಿ ಅವರು "ಹಿಂದೂಸ್ತಾನ್" ಎಂಬ ವಾರಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡು ಅದನ್ನು ದಿನಪತ್ರಿಕೆಯಾಗಿ ಪರಿವರ್ತಿಸಿದರು. 1924 ರಿಂದ ತಮ್ಮ ಜೀವನದ ಕೊನೆಯ ವರೆಗೂ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯ ನಿರ್ದೇಶಕ ಮಂಡಳಿಯ ಅಧ್ಯಕ್ಷರಾಗಿದ್ದರು. ಅದರ ಹಿಂದಿ ಆವೃತ್ತಿಯ ಪ್ರಾರಂಭಕ್ಕೂ ಅವರು ಕಾರಣರಾದರು. ಅವರ ಸಂಪಾದಕತ್ವದ ಹಲವಾರು ಪತ್ರಿಕೆಗಳು ದೇಶದ ಸ್ವಾತಂತ್ರ್ಯ ಹೋರಾಟ, ಶಿಕ್ಷಣ, ಸಮಾಜ ಸುಧಾರಣೆ, ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರಗಳಿಗೆ ಮಹತ್ತರವಾದ ಕಾಣಿಕೆಯನ್ನು ಸಲ್ಲಿಸಿದವು.
ಹಿಂದಿ, ಸಂಸ್ಕೃತ ಮತ್ತು ಆಂಗ್ಲ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಮಾಲವೀಯರು "ಮಕರಂದ" ಎಂಬ ಕಾವ್ಯನಾಮದಲ್ಲಿ ಉತ್ತಮ ಸಾಹಿತ್ಯವನ್ನೂ ರಚಿಸಿದ್ದಾರೆ.

## ಸ್ವಾತಂತ್ರ್ಯ ಹೋರಾಟಗಾರ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹತ್ವದ ಭೂಮಿಕೆಯನ್ನು ಪಂಡಿತ್ಮದನ ಮೋಹನ ಮಾಲವೀಯರು ವಹಿಸಿದರು. ಸೌಮ್ಯವಾದಿಗಳಾಗಿದ್ದ ಗೋಪಾಲಕೃಷ್ಣ ಗೋಖಲೆಯವರ ಮತ್ತು ಪ್ರಖರ ರಾಷ್ಟ್ರವಾದಿಗಳಾಗಿದ್ದ ಬಾಲಗಂಗಾಧರ ತಿಲಕರ ಅನುಯಾಯಿಗಳೆಲ್ಲರೂ ಅವರ ಜೊತೆ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಗಾಂಧೀಜಿಯವರು ಕರೆ ನೀಡಿದ ಉಪ್ಪಿನ ಸತ್ಯಾಗ್ರಹ ಮತ್ತು ಅಸಹಕಾರ ಚಳವಳಿಯಲ್ಲಿ ಮಾಲವೀಯರು ಸಕ್ರಿಯವಾಗಿ ಭಾಗವಹಿಸಿ ಬಂಧನಕ್ಕೊಳಗಾದರು. 1931 ರಲ್ಲಿ ನಡೆದ ಎರಡನೆಯ ದುಂಡು ಮೇಜಿನ ಸಮ್ಮೇಳನದಲ್ಲಿ ಮಹಾತ್ಮಾ ಗಾಂಧಿಯವರ ಜೊತೆ ಮಾಲವೀಯರೂ ಭಾಗವಹಿಸಿದ್ದರು.
ಮಹಾತ್ಮಾ ಗಾಂಧಿಯವರು ಮಾಲವೀಯರನ್ನು ತಮ್ಮ ಅಣ್ಣ ಎಂದು ಸಾರ್ವಜನಿಕವಾಗಿ ಹೇಳಿಕೊಳ್ಳುತ್ತಿದ್ದರೂ ಅವರ ಅಭಿಪ್ರಾಯಗಳಿಗೆ ಭಿನ್ನಮತವನ್ನು ವ್ಯಕ್ತಪಡಿಸಲು ಅವರು ಹಿಂಜರಿಯುತ್ತಿರಲಿಲ್ಲ. ಗಾಂಧೀಜಿಯವರ ಜೊತೆ ಅಂಬೇಡ್ಕರ್ ಭಿನ್ನಾಭಿಪ್ರಾಯ ಹೊಂದಿದ್ದಾಗ ಅವರಿಬ್ಬರ ನಡುವೆ "ಪೂನಾ ಒಪ್ಪಂದ" ಏರ್ಪಡಿಸಿದರು (24/09/1932). ಆ ಒಪ್ಪಂದಕ್ಕೆ ಗಾಂಧಿ ಮತ್ತು ಅಂಬೇಡ್ಕರ್ ಜೊತೆಗೆ ಮಾಲವೀಯ ಕೂಡ ಸಹಿ ಹಾಕಿದ್ದರು. ಕ್ವಿಟ್ಇಂಡಿಯಾ ಚಳವಳಿಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದು ಸರಿಯಲ್ಲ ಎಂದು ಸ್ಪಷ್ಟ ಮಾತುಗಳಲ್ಲಿ ಮಾಲವೀಯರು ಗಾಂಧೀಜಿಗೆ ಹೇಳಿದ್ದರು.

## ಸಮಾಜ ಸುಧಾರಕ

ಸಮಾಜ ಸುಧಾರಣೆಯ ನಿಟ್ಟಿನಲ್ಲಿ ಮಾಲವೀಯರು ಮಹತ್ತರವಾದ ಕೆಲಸಗಳನ್ನು ಮಾಡಿದ್ದಾರೆ. ಅಸ್ಪೃಶ್ಯರ ಏಳಿಗೆಗಾಗಿ ಅವರು ಬಹುವಾಗಿ ಶ್ರಮಿಸಿದರು. ಬೇರೆಬೇರೆ ಕಾರಣಗಳಿಗಾಗಿ ಮತಾಂತರಗೊಂಡವರನ್ನು ಮರಳಿ ಮಾತೃಧರ್ಮಕ್ಕೆ ಕರೆತರಲು ಸರಳವಿಧಾನವನ್ನು ಜಾರಿಗೆ ತಂದರು, ಮಹಿಳೆಯರ ಶಿಕ್ಷಣ (ಇದಕ್ಕಾಗಿ ಮಹಿಳಾ ಕಾಲೇಜನ್ನೂ ಸ್ಥಾಪಿಸಿದರು), ವಿಧವಾ ವಿವಾಹಗಳಿಗೆ ಉತ್ತೇಜನ, ಬಾಲ್ಯವಿವಾಹ ಮತ್ತು ಮೂಢನಂಬಿಕೆಗಳ ವಿರುದ್ಧ ಪ್ರಚಾರ ಮಾಡಿದರು.

ಅವರು ಭಾರತದಲ್ಲಿ "ಬಾಯ್ ಸ್ಕೌಟ್" ಪರಿಕಲ್ಪನೆಯನ್ನು ಮೊತ್ತಮೊದಲ ಬಾರಿಗೆ ಪರಿಚಯಿಸಿದರು. ಈ ನಿಟ್ಟಿನಲ್ಲಿ ಅಲಹಾಬಾದಿನಲ್ಲಿ "ಸೇವಾ ಸಮಿತಿ ಸ್ಕೌಟ್ ಅಸೋಸಿಯೇಷನ್"ಸಂಸ್ಥೆಯನ್ನು 1917 ರಲ್ಲಿ ಸ್ಥಾಪಿಸಿದರು.

ಆಂಗ್ಲೋ ಭಾರತೀಯ ನ್ಯಾಯಾಲಯಗಳಲ್ಲಿ ದೇವನಾಗರಿಯ ಬಳಕೆ ಅವರ ಅತ್ಯುತ್ತಮ ಸಾಧನೆಗಳಲ್ಲೊಂದು. ದೇಶೀಯ ಸಿದ್ಧವಸ್ತುಗಳನ್ನು ಉಪಯೋಗಿಸಲು ಸದಾ ಪ್ರೋತ್ಸಾಹ ನೀಡುತ್ತಿದ್ದ ಇವರು ಉತ್ತರಪ್ರದೇಶದ ಕೈಗಾರಿಕೋದ್ಯಮ ಸಂಘವನ್ನು ಅಲಹಾಬಾದಿನಲ್ಲಿ ಸ್ಥಾಪಿಸಲು ಸಹಾಯಮಾಡಿದರು (1907).

12 ನವೆಂಬರ್, 1946 ರಂದು ಇಹಲೋಕವನ್ನು ತ್ಯಜಿಸಿದ ಮದನ ಮೋಹನ ಮಾಳವೀಯರ ಅಪೂರ್ವ ದೇಶಸೇವೆಯನ್ನು ಸ್ಮರಿಸಿ 2014 ರಲ್ಲಿ ದೇಶವು ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಕೃತಜ್ಞತೆಯನ್ನು ವ್ಯಕ್ತ ಪಡಿಸಿತು.

**-ಕೆ. ಜನಾರ್ದನ ತುಂಗ**

ಅನಂತಪಥ

Editor: **Gopal T.S** | Assistance: **K. Janardhana Thunga** | Layout: **Ananthakumar Pratishthana**
Inputs: **Dr. M K Sridhar | Poornaprajna | Sreelakshmi Vishwanath | Meena Shastri**
Photographs: **Ananthakumar Pratishthana | Adamya Chethana | Wikipedia | Gopal TS | Kengeri Chakrapani**
Acknowledgements: **Dr. H R Nagendra | Dr. R Nagaratna | Chaya Bapat | Beluru Sudarshana**
Printed at: **Rashtrothana Mudranalaya, Chamrajpet, Bengaluru**
Published by: **Dr. Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

**ಸ್ಪಷ್ಟನೆ:** ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:
ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯಚೇತನ ತಿಂಗಳ ವರದಿ

# ನವವರುಷದ ಸ್ವಾಗತಕ್ಕೆ ವಂದೇ ಮಾತರಂ ಗಾಯನ





**ಅ**ನಂತಕುಮಾರರು ಕೇಂದ್ರಸರಕಾರದಲ್ಲಿ ಯುವಜನ, ಕ್ರೀಡೆ ಮತ್ತು ಸಂಸ್ಕೃತಿ ಸಚಿವರಾಗಿದ್ದ ಅವಧಿಯಲ್ಲಿ ಹೊಸ ಸಹಸ್ರಮಾನವನ್ನು ವಂದೇ ಮಾತರಂ ಗೀತೆಯ ಸಾಮೂಹಿಕ ಗಾಯನದೊಂದಿಗೆ ಸ್ವಾಗತಿಸಲು ನಿರ್ಧರಿಸಿದರು. ಈ ನಿರ್ಧಾರವು ದೇಶದಲ್ಲಿ ಹೊಸ ಸಂಚಲನವನ್ನು ಸೃಷ್ಟಿಸಿತು. 1999 ರ ಡಿಸೆಂಬರ್ 31 ರ ಮಧ್ಯರಾತ್ರಿ ಕಳೆದು ಹೊಸ ವರ್ಷ ಕಾಲಿಡುತ್ತಿದ್ದಂತೆ ದೇಶದಾದ್ಯಂತ ಸಂಪೂರ್ಣ ವಂದೇ ಮಾತರಂ ಮೊಳಗಿತು. ಅಲ್ಲಿಂದ ಮುಂದಿನ ನಾಲ್ಕು ವರ್ಷಗಳ ಕಾಲ ಪ್ರತಿ ಹೊಸವರ್ಷವನ್ನೂ ವಂದೇ ಮಾತರಂ ಗೀತೆಯೊಂದಿಗೆ ಸ್ವಾಗತಿಸಲಾಯಿತು.

ಕಾಂಗ್ರೆಸ್ ಪಕ್ಷವು ಮತ್ತೆ ಅಧಿಕಾರಕ್ಕೆ ಬರುತ್ತಿದ್ದಂತೆ 2004 ರಲ್ಲಿ ವಂದೇ ಮಾತರಂ ಗಾಯನವನ್ನು ನಿಲ್ಲಿಸಿತು. ಈ ಹೊಸ ಉಪಕ್ರಮವನ್ನು ನಿಲ್ಲಿಸಲು ಇಚ್ಛಿಸದ ಅನಂತಕುಮಾರರು 2004 ರಿಂದ, ಮೊದಲು ಮಲ್ಲೇಶ್ವರದ ಕ್ರೀಡಾಂಗಣದಲ್ಲಿ, ನಂತರ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮುಂದುವರೆಸಿಕೊಂಡು ಬಂದರು. ಕೋವಿಡ್ ಸಾಂಕ್ರಾಮಿಕ ಕಾಯಿಲೆಯ ಕಾರಣದಿಂದ ಅದಮ್ಯ ಚೇತನ ಸಂಸ್ಥೆಯ ಗವಿಪುರ ಕಛೇರಿಯ ಆವರಣದಲ್ಲಿ ಕಳೆದ ಎರಡು ವರ್ಷಗಳ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ಜನವರಿ ಒಂದನೇ ತಾರೀಕು, ಸಂಜೆ 4.00 ಗಂಟೆಗೆ ಸಂಸ್ಥೆಯ ಗವಿಪುರಂ ಕಛೇರಿಯ ಆವರಣದಲ್ಲಿ ನಡೆದ ಈ ವರ್ಷದ ಕಾರ್ಯಕ್ರಮದಲ್ಲಿ ಡಾ. ತೇಜಸ್ವಿನಿ ಅನಂತಕುಮಾರ್, ಶ್ರೀ ಎಚ್. ಎನ್. ಎ. ಪ್ರಸಾದ್, ಕಟ್ಟೆ ಸತ್ಯನಾರಾಯಣ, ಶ್ರೀ ಟಿ. ಎಸ್. ಗೋಪಾಲ್, ಶ್ರೀ ಅಶ್ವತ್ಥ ನಾರಾಯಣ ಕುಮಾರ್, ಶ್ರೀ ಜನಾರ್ದನ ತುಂಗ ಮತ್ತಿತರ ಗಣ್ಯರಿಂದ ದೀಪ ಬೆಳಗುವ ಮೂಲಕ ಹಾಗೂ ಭಾರತ ಮಾತೆ ಮತ್ತು ದಿವಂಗತ ಅನಂತಕುಮಾರರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಪ್ರಾರಂಭವಾಯಿತು.

ಶ್ರೀಮತಿ ಪದ್ಮಿನಿ ಓಕ್ ಮತ್ತು ಸಂಗಡಿಗರ ನೇತೃತ್ವದಲ್ಲಿ ಸಂಪೂರ್ಣ ವಂದೇ ಮಾತರಂ ಗಾಯನ ನೂರಾರು ಕಂಠಗಳಿಂದ ಏಕಕಾಲಕ್ಕೆ ಹೊಮ್ಮಿ ರೋಮಾಂಚನವನ್ನುಂಟು ಮಾಡಿತು. ಇದೇ ಸಮಯದಲ್ಲಿ, ಡಾ. ತೇಜಸ್ವಿನಿಯವರು ಹೊಸ ವರ್ಷದ ಸಂಕಲ್ಪವನ್ನೂ ಬೋಧಿಸಿದರು. ಈ ಕಾರ್ಯಕ್ರಮವನ್ನು ನೇರವಾಗಿ ಅಂತರ್ಜಾಲದ ಮೂಲಕ ವೀಕ್ಷಣೆ ಮಾಡಿದ ನೂರಾರು ಜನರು ದೂರದಿಂದಲೇ ತಮ್ಮ ದನಿಗೂಡಿಸಿದರು.




### ಹಸಿರು ಭಾನುವಾರ

ಪ್ರತಿ ಭಾನುವಾರದಂದು ಗಿಡ ನೆಡುವ ಅದಮ್ಯಚೇತನದ ಆಂದೋಲನವು ನಿರಂತರವಾಗಿ 315ಕ್ಕೂ ಹೆಚ್ಚು ವಾರಗಳಿಂದ ನಡೆದುಕೊಂಡು ಬರುತ್ತಿದೆ. 312ನೇ ಹಸಿರು ಭಾನುವಾರವು 19 ಡಿಸೆಂಬರ್ 2021ರಂದು ಕೆಂಪಾಂಬುಧಿ ಕೆರೆಯ ಆವರಣದಲ್ಲಿ ಜರುಗಿತು. 313ನೇ ಭಾನುವಾರದಂದು ಅದಮ್ಯ ಚೇತನದ ಸ್ಥಾಪಕ ಸದಸ್ಯರಲ್ಲೊಬ್ಬರಾದ ಹಿರಿಯ ಪರಿಸರವಾದಿ ಶ್ರೀ ಹೆಚ್.ಎನ್. ಎ. ಪ್ರಸಾದ್ ಅವರ 75ನೆಯ ಜನ್ಮದಿನವೂ ಆಗಿದ್ದುದು ವಿಶೇಷ. ಈ ಶುಭಸಂದರ್ಭದಲ್ಲಿ ಡಾಬಸ್ ಪೇಟೆ ಸಮೀಪ ಧರಿತ್ರೀ ಟ್ರಸ್ಟ್ ಆವರಣದಲ್ಲಿ ಅದಮ್ಯಚೇತನದ ಕಾರ್ಯಕರ್ತರು ಪ್ರಸಾದ್ ದಂಪತಿಯವರ ಸಮ್ಮುಖದಲ್ಲಿ 75 ಗಿಡಗಳನ್ನು ನೆಟ್ಟು ಶುಭ ಕೋರಿದರು. ಡಾ. ತೇಜಸ್ವಿನಿ ಅನಂತಕುಮಾರ್, ಶ್ರೀ ಶ್ರೀಕಾಂತ ಬೆಟಗೇರಿ, ಕರ್ನಲ್ ಹರಿಹರನ್ ಮೊದಲಾದವರು ಉಪಸ್ಥಿತರಿದ್ದರು.
314ನೇ ಹಸಿರು ಭಾನುವಾರ ಕಾರ್ಯಕ್ರಮವನ್ನು ಭುವನೇಶ್ವರಿ ನಗರದಲ್ಲೂ 315 ನೇ ಕಾರ್ಯಕ್ರಮವನ್ನು ಉತ್ತರಹಳ್ಳಿಯ ಬಾಲಾಜಿ ಲೇಔಟ್ ನಲ್ಲೂ 316ನೇ ಕಾರ್ಯಕ್ರಮವನ್ನು ಅದಮ್ಯಚೇತನದ ಪರಿಸರದಲ್ಲೂ ಹಮ್ಮಿಕೊಳ್ಳಲಾಯಿತು.

### ಶ್ರೀ ಚೇತನ

ಶ್ರೀ ಚೇತನ ಆನ್ ಲೈನ್ ಕಾರ್ಯಕ್ರಮಗಳು ಪ್ರತಿ ಮಂಗಳವಾರದಂದು ನಡೆಯುತ್ತಿದ್ದು ಪ್ರತಿ ವಾರ ದೇಶಭಕ್ತಿ ಗೀತೆ, ಮಂಕುತಿಮ್ಮನ ಕಗ್ಗ ವಾಚನ, ಔಷಧೀಯ ಸಸ್ಯ ಪರಿಚಯ, ಆರೋಗ್ಯ ಅಡುಗೆ ಮೊದಲಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಗುತ್ತಿದೆ.

### ಅನ್ನದಾನ

ಅದಮ್ಯಚೇತನದ ವತಿಯಿಂದ ನಿತ್ಯ ಅನ್ನದಾನ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಿದ್ದು, ಗವಿಪುರ, ನಗರ್ತಪೇ, ಮಾರೇನಹಳ್ಳಿ, ಜಯನಗರ ಮೊದಲಾದ ಕಡೆಗಳಲ್ಲಿ ಅಗತ್ಯವಿರುವ ಜನರು ರುಚಿಕರವಾದ ಭೋಜನ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

### ಗ್ರಾಮ ಚೇತನ

ಜಿಗಣಿಯ ಎಸ್-ವ್ಯಾಸ ಸಂಸ್ಥಾನದ ಸಹಯೋಗದೊಡನೆ ಅನಂತಕುಮಾರ್ ಪ್ರತಿಷ್ಠಾನವು ಗ್ರಾಮ ಚೇತನ- ಪಂಚಾಯತ್ ಸದಸ್ಯೆಯರಿಗಾಗಿ ಆಯೋಜಿಸಿದ್ದ ನೇತೃತ್ವ ವಿಕಸನ ಶಿಬಿರದಲ್ಲಿ ಪಾಲ್ಗೊಂಡ ಶಿಬಿರಾರ್ಥಿಗಳು ಅದಮ್ಯ ಚೇತನಕ್ಕೆ ಭೇಟಿ ನೀಡಿ ಸಂಸ್ಥೆಯ ಅಡುಗೆಮನೆ ಮತ್ತಿತರ ವ್ಯವಸ್ಥೆಗಳ ಪರಿಚಯ ಪಡೆದುಕೊಂಡರು. ಡಿಸೆಂಬರ್ 24-26 ರವರೆಗೆ ಜರುಗಿದ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ ಸಂಕಪ್ಪನವರು ಪಂಚಾಯತ್ ಸದಸ್ಯರಿಗಾಗಿ ನಡೆಯುತ್ತಿರುವ ನಾಯಕತ್ವ ತರಬೇತಿಯ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತಾಗಲೆಂದು ಆಶಿಸಿದರು.

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.
ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: 8884182415




## ಗ್ರಾಮ ಚೇತನ - ಚಿತ್ರಸಂಪುಟ

2021 ಡಿಸೆಂಬರ್ 24 ರಿಂದ 26ರವರೆಗೆ ಜಿಗಣಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪಂಚಾಯತ್ ಸದಸ್ಯೆಯರಿಗಾಗಿ ನಡೆದ **'ಗ್ರಾಮ ಚೇತನ'** ನೇತೃತ್ವ ತರಬೇತಿ ಶಿಬಿರದ ಕೆಲವು ಛಾಯಾಚಿತ್ರಗಳು










## ಅನಂತ ಚಿತ್ರಸಂಪುಟ

ಶ್ರೀ ಅನಂತಕುಮಾರ್ ಅವರು ನಾಡಿನ ವಿವಿಧೆಡೆ ಆಯೋಜಿಸಲಾಗುತ್ತಿದ್ದ ಅನೇಕ ವಿಶೇಷ ದಿನಗಳು, ಮಹನೀಯರ ಜಯಂತಿ, ಜನ್ಮದಿನಾಚರಣೆಗಳಲ್ಲಿ ತಪ್ಪದೆ ಪಾಲ್ಗೊಂಡು ಆಯಾ ದಿನದ ಮಹತ್ವವನ್ನೂ, ಶ್ರೇಷ್ಠವ್ಯಕ್ತಿಯ ಗುಣಾದರ್ಶಗಳನ್ನೂ ಸ್ಮರಿಸುವ ಕರ್ತವ್ಯವನ್ನು ಪಾಲಿಸುತ್ತಿದ್ದರು.















